ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ   NIMMURU SUDDI

ಸಂಪಾದಕರು: ಸುಂದರ್   Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 246 RNI Number : KNKAN/25/A2770 18-09-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :246 ರಾಯಚೂರು 18-09-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ಕಲಬುರಗಿಯಲ್ಲಿ ಅದ್ಧೂರಿ ಸ್ಟ್ರೀಟ್ ಫೆಸ್ಟಿವಲ್‌ಗೆ ಚಾಲನೆ

ಕಲ್ಯಾಣ ಕರ್ನಾಟಕ ಭಾಗದ ಇತಿಹಾಸವೇ ಕರ್ನಾಟಕದ ಇತಿಹಾಸವಾಗಬೇಕು: ಸಿಎಂ

ಕಲಬುರಗಿ,ಸೆ.17– ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ವೇಗವನ್ನು ಕಲಬುರಗಿ ನಗರ ತೋರಿಸಿಕೊಡುತ್ತಿದ್ದು, ಅಭಿವೃದ್ಧಿಯಲ್ಲಿ ಬೆಂಗಳೂರಿಗಿಂತ ಯಾವುದರಲ್ಲೂ ಕಡಿಮೆಯಿಲ್ಲ ಎಂಬುದನ್ನು ಕಲಬುರಗಿ ಸಾಬೀತುಪಡಿಸುತ್ತಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದಲ್ಲಿ ಆಯೋಜಿಸಿರುವ ವೈವಿಧ್ಯಮಯ ಸಾಂಸ್ಕೃತಿಕ, ಸಂಗೀತ, ನೃತ್ಯ ಹಾಗೂ ಮನರಂಜನಾ ಕಾರ್ಯಕ್ರಮಗಳ ಸ್ಟ್ರೀಟ್ ಫೆಸ್ಟಿವಲ್‌ಗೆ ಬುಧವಾರ ಸಂಜೆ ಚಾಲನೆ ನೀಡಿ, ಅಪ್ಪ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು."ಕಲ್ಯಾಣ ಕರ್ನಾಟಕ ಯಾ ವ ರೀತಿಯಲ್ಲಿ ಅಭಿವೃದ್ಧಿಯಾಗುತ್ತಿದೆ ಎಂಬುದು ಈಗ ಎಲ್ಲರಿಗೂ ಗೋಚರಿಸುತ್ತಿದೆ.

ಟೀಕೆ ಮಾಡುವುದಕ್ಕಿಂತ ನಗುನಗುತ್ತಾ ಈ ಸಂಭ್ರಮವನ್ನು ಆಚರಿಸಬೇಕು ಎಂಬುದು ನನ್ನ ಆಶಯ. ನಾವೆಲ್ಲರೂ ಒಟ್ಟಾಗಿ ಈ ಕಾರ್ಯಕ್ರಮವನ್ನು ಕಣ್ತುಂಬಿಕೊಳ್ಳಬೇಕು ಎಂಬ ಉದ್ದೇಶದಿಂದ ಇಲ್ಲಿಗೆ



ಬಂದಿದ್ದೇವೆ," ಎಂದು ಹೇಳಿದರು

ಕಲಬುರಗಿಯಲ್ಲಿ ಶುದ್ಧ ಹಾಗೂ ಸುಂದರ ಪರಿಸರ ನಿರ್ಮಾಣವಾಗಿರುವುದನ್ನು ಶ್ಲಾಘಿಸಿದ ಅವರು, ಪುಟಾಣಿ ಮಕ್ಕಳು, ಹಿರಿಯರು ಹಾಗೂ ಮಹಿಳೆಯರು ಕಾರ್ಯಕ್ರಮವನ್ನು ನೋಡಿ ಸಂಭ್ರಮಿಸುತ್ತಿರುವುದು ಸಂತೋಷ ತಂದಿದೆ. ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾದ ಕಲಬುರಗಿ ಜನತೆಗೆ ಅಭಿನಂದನೆಗಳು ಎಂದು ಹೇಳಿದರು.

ಕಲ್ಯಾಣ ಕರ್ನಾಟಕದ ಇತಿಹಾಸವೇ ಕರ್ನಾಟಕದ ಇತಿಹಾಸವಾಗಬೇಕು ಎಂಬುದು ತಮ್ಮ ಆಶಯವಾಗಿದೆ ಎಂದು ತಿಳಿಸಿದ ಡಿ.ಕೆ. ಶಿವಕುಮಾರ್, ಈ ಭಾಗದ ಅಭಿವೃದ್ಧಿಗೆ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಕೊಡುಗೆಯನ್ನು ಸ್ಮರಿಸಿದರು.

ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳಿಗೆ ವೈದ್ಯಕೀಯ, ಇಂಜಿನಿಯರಿಂಗ್ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿ ಹೆಚ್ಚಿನ ಅವಕಾಶಗಳು ದೊರೆಯುವಂತೆ ಮಾಡಲು ಮಲ್ಲಿಕಾರ್ಜುನ ಖರ್ಗೆ ಅವರ ಪಾತ್ರ ಮಹತ್ವದ್ದಾಗಿದೆ. ಈ ಭಾಗಕ್ಕೆ ಅವರು ನೀಡಿರುವ ಕೊಡುಗೆ ಅನನ್ಯವಾಗಿದೆ ಎಂದರು.

3ಡಿ ಲೈಟ್ ಶೋ, ಡ್ರೋನ್ ಶೋ ಆಕರ್ಷಣೆ : ಉದ್ಘಾಟನಾ ಕಾರ್ಯಕ್ರಮದ ಬಳಿಕ ನಡೆದ 3ಡಿ ಲೈಟ್ ಶೋ ಹಾಗೂ ಡ್ರೋನ್ ಶೋ ಸಾರ್ವಜನಿಕರ ಗಮನ ಸೆಳೆಯಿತು. ವೈವಿಧ್ಯಮಯ ಸಾಂಸ್ಕೃತಿಕ,

3ನೇ ಪುಟ.....

ಕಲ್ಯಾಣ ಕರ್ನಾಟಕಕ್ಕೆ ಕೇಂದ್ರದಿಂದ 5 ಸಾವಿರ ಕೋಟಿ ನೀಡಲಿ: ಸಚಿವ ಅಜಯ್‌ಸಿಂಗ್ ಆಗ್ರಹ

ರಾಯಚೂರು,ಸೆ.17– ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ರಾಜ್ಯ ಸರ್ಕಾರ 5 ಸಾವಿರ ಕೋಟಿ ಅನುದಾನ ನೀಡುತ್ತಿದ್ದು, ಕೇಂದ್ರ ಸರ್ಕಾರವೂ ಇದೇ ಪ್ರಮಾಣದ ಅನುದಾನ ನೀಡಬೇಕು ಎಂದು ಸಚಿವ ಡಾ. ಅಜಯ್ ಧರಂ ಸಿಂಗ್ ಆಗ್ರಹಿಸಿದರು.



ಕರ್ನಾಟಕದ ಬಜೆಟ್ ಸುಮಾರು 4.48 ಲಕ್ಷ ಕೋಟಿ ಇದ್ದು, ಅದರಲ್ಲಿ ಕಲ್ಯಾಣ ಕರ್ನಾಟಕಕ್ಕೆ 5 ಸಾವಿರ ಕೋಟಿ ಮೀಸಲಿಡಲಾಗುತ್ತಿದೆ. ಕೇಂದ್ರ ಸರ್ಕಾರದ ಬಜೆಟ್ ಸುಮಾರು 52 ಲಕ್ಷ ಕೋಟಿ ಇದೆ. ಹೀಗಾಗಿ ಕೇಂದ್ರ ಸರ್ಕಾರವೂ ಕಲ್ಯಾಣ ಕರ್ನಾಟಕಕ್ಕೆ 5 ಸಾವಿರ ಕೋಟಿ ನೀಡಿದರೆ ಒಟ್ಟು 10 ಸಾವಿರ ಕೋಟಿ ಅನುದಾನ ದೊರೆಯಲಿದ್ದು, ಈ ಭಾಗದ ಅಭಿವೃದ್ಧಿಗೆ ಇನ್ನಷ್ಟು ವೇಗ ಸಿಗಲಿದೆ ಎಂದರು.

"ಮೋದಿಯವರ ಕೊಡುಗೆ ಏನು?" ಎಂದು ಪ್ರಶ್ನಿಸಿದ ಅವರು, ಕಳೆದ 12–13 ವರ್ಷಗಳಿಂದ ನರೇಂದ್ರ ಮೋದಿ ಅವರು ಅಧಿಕಾರದಲ್ಲಿದ್ದಾರೆ. 2014ರಲ್ಲಿ ಕರ್ನಾಟಕದಿಂದ 17 ಸಂಸದರು ಆಯ್ಕೆಯಾಗಿದ್ದರು. 2019ರಲ್ಲಿ 26 ಎನ್‌ಡಿಎ ಸಂಸದರು ಆಯ್ಕೆಯಾಗಿದ್ದರು. ಈಗಲೂ 19 ಸಂಸದರು ಇದ್ದಾರೆ. ಆದರೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಕೇಂದ್ರದಿಂದ ಹೆಚ್ಚಿನ ಅನುದಾನ ತರುವ ಕುರಿತು ಯಾರೂ ಧ್ವನಿ ಎತ್ತುತ್ತಿಲ್ಲ ಎಂದು ಟೀಕಿಸಿದರು.

ಕಲ್ಯಾಣ ಕರ್ನಾಟಕದ ಜನರು ಕಾಂಗ್ರೆಸ್‌ನ ಐವರು ಸಂಸದರನ್ನು ಆಯ್ಕೆ ಮಾಡಿದ್ದಾರೆ. ಈ ಭಾಗಕ್ಕೆ ಕೇಂದ್ರ ಸರ್ಕಾರ ಏಕೆ ಹೆಚ್ಚಿನ ಅನುದಾನ ನೀಡಬಾರದು? ಅಭಿವೃದ್ಧಿಗೆ ಏಕೆ

3ನೇ ಪುಟ.....

ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಜಿಲ್ಲಾ ಕ್ರೀಡಾಂಗಣದಲ್ಲಿ ಉಸ್ತುವಾರಿ ಸಚಿವರಿಂದ ಧ್ವಜಾರೋಹಣ

ಕ.ಕ.ಭಾಗದ ಅಭಿವೃದ್ಧಿಗೆ ಅನುದಾನ,ಯೋಜನೆಗಳ ಅನುಷ್ಠಾನಕ್ಕೂ ಒತ್ತು



ರಾಯಚೂರು,ಸೆ.17–ಕಲ್ಯಾಣ ಕರ್ನಾಟಕಕ್ಕೆ ಸಂವಿಧಾನದ 371(ಜೆ) ಅಡಿ ದೊರೆತಿರುವ ವಿಶೇಷ ಅವಕಾಶವು ಕೇವಲ ಹೆಚ್ಚುವರಿ ಅನುದಾನಕ್ಕೆ ಸೀಮಿತವಾಗದೆ, ಶಿಕ್ಷಣ, ಆರೋಗ್ಯ, ಉದ್ಯೋಗ, ರಸ್ತೆ, ನೀರಾವರಿ ಹಾಗೂ ಸಾಮಾಜಿಕ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಜನರ ಬದುಕಿಗೆ ಸ್ಪಷ್ಟ ಬದಲಾವಣೆ ತರಬೇಕು. ಈ ಹಿನ್ನೆಲೆಯಲ್ಲಿ ಕೆಕೆಆರ್‌ಡಿಬಿ ಅನುದಾನದಡಿ ಕೈಗೆತ್ತಿಕೊಂಡಿರುವ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ಧರ್ಮಸಿಂಗ್ ಹೇಳಿದರು.

ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯ ಅಂಗವಾಗಿ ಇಂದು ರಾಯಚೂರಿನ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಅನುದಾನ ಹಂಚಿಕೆಯಷ್ಟೇ ಅಲ್ಲ, ನಿಗದಿತ ಅವಧಿ

3ನೇ ಪುಟ.....

ನಾಗಡದಿನ್ನಿ ಶಾಲೆಯಲ್ಲಿ 30 ವರ್ಷ ಸೇವೆ ಸಲ್ಲಿಸಿದ ಶಿಕ್ಷಕ ವಿಜಯಕುಮಾರ್‌ಗೆ ಬೀಳ್ಕೊಡುಗೆ

ಅರಕೇರಾ,ಸೆ.17–

ಸಂಸ್ಕಾರ ಬೆಳೆಸಿಕೊಂಡು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಲು ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಕರ ವೃತ್ತಿ ಪವಿತ್ರವಾದದ್ದು. ಶಿಕ್ಷಕರು ತಮ್ಮ ವೃತ್ತಿಯ ಜತೆಗೆ ಸಮಾಜ ಸೇವೆಗೂ ಆದ್ಯತೆ ನೀಡಬೇಕು ಎಂದು ದೇವದುರ್ಗ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ವಿರುಪನಗೌಡ ನಾಗಡದಿನ್ನಿ ಹೇಳಿದರು.

ಅವರು ತಾಲೂಕಿನ ನಾಗಡದಿನ್ನಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 30 ವರ್ಷ ಸೇವೆ ಸಲ್ಲಿಸಿ ವರ್ಗಾವಣೆಗೊಂಡ ಶಿಕ್ಷಕ ವಿಜಯಕುಮಾರ್ ಅತ್ತನೂರಿಗೆ ಏರ್ಪಡಿಸಿದ ಬೀಳ್ಕೊಡುಗೆ ಸಮಾ



ರಂಭದಲ್ಲಿ ಮಾತನಾಡುತ್ತ. ಉತ್ತಮ ಸಂಸ್ಕಾರ ಹೊಂದಿದ ವ್ಯಕ್ತಿಯನ್ನು ರೂಪಿಸುವಲ್ಲಿ, ಕೌಶಲ್ಯ ಬೆಳೆಸುವಲ್ಲಿ ಹಾಗೂ ಜೀವನದ ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸುವಲ್ಲಿ ಗುರುವಿನ ಪಾತ್ರ ಬಹಳ ಮುಖ್ಯ. ಕೇವಲ ಪಾಠ ಹೇಳಿಕೊಟ್ಟ ಮಾತ್ರಕ್ಕೆ ಗುರುವಾಗುವುದಿಲ್ಲ. ಗುರುಗಳ ನಡತೆ, ವ್ಯಕ್ತಿತ್ವ ಹಾಗೂ ವಿದ್ಯಾರ್ಥಿಗಳೊಂದಿಗಿನ ಒಡನಾಟವೂ ಅಷ್ಟೇ ಮಹತ್ವದ್ದಾಗಿದೆ ಎಂದರು.

ಶಿಕ್ಷಕ ರವಿ ಜಾಂಪಾಡೆ ಮಾತನಾಡಿ, ಉತ್ತಮ ಗುರುಗಳನ್ನು ಗೌರವಿಸುವುದು ಸಮಾಜವನ್ನು ಗೌರವಿಸಿದಂತೆ. ಮನುಷ್ಯ ಎಷ್ಟೇ ದೊಡ್ಡ ವ್ಯಕ್ತಿಯಾದರೂ ಗುರುವಿನ ಮಾರ್ಗದರ್ಶನ ಅತ್ಯಂತ ಪ್ರಮುಖವಾಗಿದೆ. ನಮಗೆ ವಿದ್ಯೆ ಕಲಿಸಿದ ಗುರುಗಳನ್ನು ಎಂದಿಗೂ ಮರೆಯಲು

3ನೇ ಪುಟ.....



ಹಳೇ ಕಿರಾಣಿ ಬಜಾರ್ ಗಣೇಶೋತ್ಸವದಲ್ಲಿ ಮಹಿಳೆಯರ ಸೇವೆ ವಿಶೇಷ 1500ರಿಂದ 2000 ಹೋಳಿಗೆ, ಕಡುಬು ತಯಾರಿ- ಅನ್ನದಾಸೋಹ

ಮುದಗಲ್,ಸೆ.17–

ಪಟ್ಟಣದ ಹಳೇ ಕಿರಾಣಿ ಬಜಾರ್‌ನಲ್ಲಿ ಗಣೇಶ ಪ್ರತಿಷ್ಠಾಪನೆಯ ಅಂಗವಾಗಿ ಮಹಿಳೆಯರು ಭಕ್ತಿಭಾವದಿಂದ ಹೋಳಿಗೆ ಮತ್ತು ಕಡುಬು ತಯಾರಿಸುವ ಮೂಲಕ ವಿಶೇಷ ಸೇವೆ ಸಲ್ಲಿಸುತ್ತಿದ್ದಾರೆ.

ಗಣೇಶೋತ್ಸವದ ಪ್ರಯುಕ್ತ ಸುಮಾರು 1500ರಿಂದ 2000 ಹೋಳಿಗೆ ಹಾಗೂ ಕಡುಬುಗಳನ್ನು ತಯಾರಿಸಲಾಗುತ್ತಿದ್ದು, ಐದು ದಿನಗಳ ಕಾಲ ಅನ್ನದಾಸೋಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಗಣೇಶೋತ್ಸವದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ವಿಶೇಷ ಗಮನ ಸೆಳೆಯುತ್ತಿದ್ದು, ಮಹಿಳೆಯರು ಒಗ್ಗಟ್ಟಿನಿಂದ ಹೋಳಿಗೆ ಮತು ಕಡುಬು

3ನೇ ಪುಟ.....

ಸಿರವಾರ: ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆ



ಸಿರವಾರ,ಸೆ.17–

ಪಟ್ಟಣದ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿ 'ಕಲ್ಯಾಣ ಕರ್ನಾಟಕ ವಿಮೋಚನಾ ದಿನ'ವನ್ನು ಅತ್ಯಂತ ಅರ್ಥಪೂರ್ಣವಾಗಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಈ ವಿಶೇಷ ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದ್ರಿ ಅವರು ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿ, ಧ್ವಜಕ್ಕೆ ಗೌರವ ವಂದನೆ ಸಲ್ಲಿಸಿದರು.

ಬಳಿಕ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹೈದರಾಬಾದ್ ಕರ್ನಾಟಕ ಭಾಗದ ಸ್ವಾತಂತ್ರ್ಯದ ರೋಚಕ ಇತಿಹಾಸವನ್ನು ಮೆಲುಕು ಹಾಕಿದರು.ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ:

1947 ಆಗಸ್ಟ್ 15 ರಂದು ಇಡೀ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕರೂ, ಇಂದಿನ ಕಲ್ಯಾಣ ಕರ್ನಾಟಕ ಭಾಗದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳು ನಿಜಾಮರ ಆಡಳಿತದಲ್ಲಿದ್ದ 'ಹೈದರಾಬಾದ್ ಸಂಸ್ಥಾನ'ದ ಒಳಗೆ ಇದ್ದವು. ನಿಜಾಮರು ಹಾಗೂ ಅವರ ಉಗ್ರ ಅಧೀನ ಪಡೆಯಾದ 'ರಝಾಕಾರರು' ಇಲ್ಲಿನ ಜನರ ಮೇಲೆ ನಡೆಸಿದ ದಬ್ಬಾಳಿಕೆ ಮಿತಿಮೀರಿತ್ತು ಎಂದು ಸ್ಮರಿಸಿದರು.ಆಪರೇಷನ್ ಪೋಲೊ ಮತ್ತು ಐತಿಹಾಸಿಕ ವಿಮೋಚನೆ: ನಿಜಾಮರ ದೌರ್ಜನ್ಯವನ್ನು ವಿರೋಧಿಸಿ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಈ ಭಾಗದ ಜನತೆ ತೀವ್ರ ಸಶಸ್ತ್ರ ಹೋರಾಟ ನಡೆಸಿದರು. ಅಂತಿಮವಾಗಿ

3ನೇ ಪುಟ.....

ಜೋಳ ಖರೀದಿ ಹಣ ಪಾವತಿಯಲ್ಲಿ ಆದ ವಿಳಂಬದ ಕುರಿತು ಸತ್ಯಸತ್ಯತೆ ಅರಿಯಬೇಕು

ಮಾನ್ವಿ,ಸೆ.17– ರೈತರ ಜೋಳ ಖರೀದಿ ಹಣ ಪಾವತಿಯಲ್ಲಿ ಆದ ವಿಳಂಬದ ಕುರಿತು ಸತ್ಯ ಸತ್ಯತೆಯನ್ನು ತಿಳಿಯದೇ ಕೆಲ ರಾಜಕೀಯ ಮುಖಂಡರು, ಹೋರಾಟಗಾರರು ವಿನಾಕಾರಣ ಬೊಗಳುತ್ತಿದ್ದಾರೆ ಎಂದು ಮಾಜಿ ಸಚಿವ ವಿಧಾನ ಪರಿಷತ್ ಸದಸ್ಯ ಎನ್.ಎಸ್.ಬೋಸರಾಜು ಅಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರೈತರ ಜೋಳ ಖರೀದಿ ಹಣ ಪಾವತಿಯಲ್ಲಿ ಆದ ವಿಳಂಬವನ್ನು ತಿಳಿದುಕೊಳ್ಳದೇ ವಿನಾಕಾರಣ ಆರೋಪ ಮಾಡುವುದು ಸರಿಯಲ್ಲ ಸತ್ಯ ಸತ್ಯತೆಯನ್ನು ತಿಳಿದುಕೊಂಡು ಮಾತನಾಡಬೇಕು ಎಂದು ಹೇಳಿದರು.

ಜೋಳ ಖರೀದಿ ಹಣವನ್ನು ರಾಜ್ಯ ಸರ್ಕಾರ ಬಹುಪಾಲು ಬಿಡುಗಡೆ ಮಾಡಿದೆ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ 1 ಸಾವಿರ ಕೋಟಿ ಹಣ ಬರಬೇಕು ಕೇಂದ್ರ ಸರ್ಕಾರದಿಂದ ಬರಬೇಕಾದ ವಿವಿಧ ಅನುದಾನ ಹಾಗೂ ಆಹಾರ ಧಾನ್ಯ ಖರೀದಿಯ ಬಾಕಿ ಹಣ ಸಮರ್ಪಕವಾಗಿ ಬಿಡುಗಡೆಯಾಗುತ್ತಿಲ್ಲ ಬೆಂಬಲ ಬೆಲೆ ಯೋಜನೆಯಡಿ ರಾಗಿ ಮತ್ತು ಜೋಳವನ್ನು ಕೇಂದ್ರ ಸರ್ಕಾರದ ಆಹಾರ ಇಲಾಖೆ ರೈತರಿಂದ ಖರೀದಿಸುತ್ತಿದ್ದು, ರಾಜ್ಯ ಸರ್ಕಾರ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತದೆ

ಕೇಂದ್ರದ ಆಹಾರ ಇಲಾಖೆಯಿಂದ ರಾಗಿ ಮತ್ತು ಜೋಳ ಖರೀದಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಸುಮಾರು 1,000



ಕೋಟಿ ಬಾಕಿ ಬರಬೇಕಿದ್ದು, ಇದುವರೆಗೂ ಹಣ ಬಿಡುಗಡೆಯಾಗಿಲ್ಲ. ಮುಖ್ಯಮಂತ್ರಿ ಎರಡು ಬಾರಿ ದೆಹಲಿಗೆ ತೆರಳಿ ಬಾಕಿ ಹಣ ಬಿಡುಗಡೆ ಮಾಡುವಂತೆ ಮನವಿ ಮಾಡಿದರೂ ಕೇಂದ್ರದಿಂದ ಸ್ಪಂದನೆ ದೊರೆತಿಲ್ಲ ಎಂದು ಹೇಳಿದರು.

ರೈತರ ಸಂಕಷ್ಟವನ್ನು ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿ ಅವರು ರಾಜ್ಯದ ತುರ್ತು ಪರಿಸ್ಥಿತಿಗಾಗಿ ಮೀಸಲಿಟ್ಟಿರುವ ಆವರ್ತ ನಿಧಿಯನ್ನು ಬಳಸಿಕೊಂಡು ಮುಂಗಾರು ಅವಧಿಯಲ್ಲಿ ಪ್ರತಿ ಕ್ವಿಂಟಾಲ್‌ಗೆ 3,690ರಂತೆ ಮೇ 23ರವರೆಗೆ ಜಿಲ್ಲೆಯ ರೈತರಿಗೆ 309.65 ಕೋಟಿ ಪಾವತಿಸಲಾಗಿದೆ. ಹಿಂಗಾರು ಜೋಳದ 156 ಕೋಟಿ ಮೊತ್ತದಲ್ಲಿ 47.50 ಕೋಟಿ ಪಾವತಿಸಲಾಗಿದ್ದು, ಇನ್ನೂ 109 ಕೋಟಿ ರೈತರಿಗೆ ನೀಡಬೇಕಾಗಿದೆ ಎಂದು ವಿವರಿಸಿದರು.

ರೈತರಿಂದ ಖರೀದಿಸಿದ ರಾಗಿ ಮತ್ತು ಜೋಳವನ್ನು ಪಡಿತರದಾರರಿಗೆ ವಿತರಿಸಿದ ನಂತರವೂ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಹಣ ಬಿಡುಗಡೆಯಾಗಿಲ್ಲ. ಈ ಕುರಿತು ರಾಜ್ಯದ ಆಹಾರ ಸಚಿವರು ಹಾಗೂ ಆಹಾರ ಇಲಾಖೆಯ ನಿರ್ದೇಶಕರು ದೆಹಲಿಗೆ ತೆರಳಿ ಕೇಂದ್ರದ ಅಧಿಕಾರಿಗಳೊಂದಿಗೆ ಚರ್ಚಿಸಿ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು.

ರಾಜ್ಯದಿಂದ ಆಯ್ಕೆಯಾಗಿರುವ ಎನ್ ಡಿ ಎ ಮೈತ್ರಿಕೂಟದ ಸಂಸದರು ಹಾಗೂ ಕೇಂದ್ರ ಸಚಿವರು ರಾಜ್ಯದ ಪರವಾಗಿ ಧ್ವನಿ ಎತ್ತಬೇಕು. ರೈತರ ವಿಷಯದಲ್ಲಿ ರಾಜಕೀಯ ಮಾಡದೆ, ಜಿಲ್ಲೆಗೆ ಹಾಗೂ ರಾಜ್ಯಕ್ಕೆ ಬರಬೇಕಾದ ಅನುದಾನವನ್ನು ಕೇಂದ್ರದಿಂದ ಬಿಡುಗಡೆ ಮಾಡಿಸಲು ಪ್ರಯತ್ನಿಸಬೇಕು ಎಂದು ಎನ್.ಎಸ್. ಬೋಸರಾಜು ಒತ್ತಾಯಿಸಿದರು.

ಎಲ್‌ನಿನೊ ಪ್ರಭಾವದಿಂದ ರಾಜ್ಯದ ಹಲವು ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ ಉಂಟಾಗಿದ್ದು, ಎನ್‌ಡಿಆರ್‌ಎಫ್ ನಿಯಮಗಳಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಬರ ಪರಿಸ್ಥಿತಿಯ ವರದಿ ಸಲ್ಲಿಸಿದೆ. ಕೇಂದ್ರದ ಅಧಿಕಾರಿಗಳು ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ನೀಡಲಿದ್ದಾರೆ ಎಂದರು.

ತುಂಗಭದ್ರ ಜಲಾಶಯದಲ್ಲಿ ಕುಡಿಯುವ ನೀರಿಗಾಗಿ 10

3ನೇ ಪುಟ.....



ಸಿರವಾರದಲ್ಲಿ ಅರ್ಥಪೂರ್ಣವಾಗಿ ಜರುಗಿದ ವಿಶ್ವಕರ್ಮ ಜಯಂತಿ; ಆದಿಶಿಲ್ಪಿಯ ಕೊಡುಗೆ ಸ್ಮರಣೆ

ಸಿರವಾರ

ಸ್ಥಳೀಯ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿ ಭಗವಾನ್ ಶ್ರೀ ವಿಶ್ವಕರ್ಮ ಜಯಂತಿಯನ್ನು ಶ್ರದ್ಧಾ-ಭಕ್ತಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿಶ್ವಕರ್ಮರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದರಿಯವರು, ಭೂಮಿಯ ಮೇಲೆ ಅರಮನೆಗಳು, ಮಹಲುಗಳು, ವಾಹನಗಳು ಮತ್ತು ಆಯುಧಗಳು ಸೇರಿದಂತೆ ಪ್ರಮುಖ ತಾಂತ್ರಿಕ ವಸ್ತುಗಳನ್ನು ನಿರ್ಮಿಸಿದ ಆದಿಶಿಲ್ಪಿ ವಿಶ್ವಕರ್ಮರು ಎಂದು ಅವರ ಅನನ್ಯ ಕೊಡುಗೆಯನ್ನು ಸ್ಮರಿಸಿದರು.

ಐತಿಹಾಸಿಕ ನಿರ್ಮಾಣಗಳು: ಇಂದ್ರಪುರಿ, ದ್ವಾರಕಾ, ಹಸ್ತಿನಾಪುರ, ಸ್ವರ್ಗಲೋಕ ಮತ್ತು ಲಂಕಾ ನಗರಗಳ ನಿರ್ಮಾಣವನ್ನು ವಿಶ್ವಕರ್ಮರು ಮಾಡಿದ್ದರು ಎಂದು ವಿಸ್ತೃತವಾಗಿ ತಿಳಿಸಲಾಯಿತು.

3ನೇ ಪುಟ.....

ಬಳ್ಳಾರಿಯಲ್ಲಿ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

ಪ್ರಜಾಪ್ರಭುತ್ವ ಉಳಿಸಲು ಯುವಜನತೆ ನಾಯಕತ್ವ ಗುಣ ಬೆಳೆಸಿಕೊಳ್ಳಿ: ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ ಕರೆ



ಬಳ್ಳಾರಿ,ಸೆ.17

ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯುವ ಜವಾಬ್ದಾರಿ ಇಂದಿನ ಯುವ ಪೀಳಿಗೆಯ ಮೇಲಿದ್ದು, ಯುವಕರು ಮೊಬೈಲ್ ವ್ಯಾಮೋಹದಿಂದ ಹೊರಬಂದು ಪುಸ್ತಕ ಓದುವ ಹವ್ಯಾಸ ಹಾಗೂ ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಗರದ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಮಂಗಳವಾರ ಆಯೋಜಿಸಿದ್ದ 'ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ' ಹಾಗೂ ಯುವ ಸಮುದಾಯಕ್ಕೆ ದೇಶದ ಸಂಸದೀಯ ವ್ಯವಸ್ಥೆ ಪರಿಚಯ ಮಾಡಿಕೊಡುವ 'ಯುವ ಸಂಸತ್ತು' ಕಾರ್ಯಕ್ರಮದ ಚಾಲನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದೆ ರಾಜಪ್ರಭುತ್ವದ ಕಾಲದಲ್ಲಿ ಕೇವಲ ರಾಣಿಯ ಗರ್ಭದಿಂದ ಮಾತ್ರ ರಾಜರು ಜನಿಸುತ್ತಿದ್ದರು. ಆದರೆ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಮಾನತೆಯ ಸಂವಿಧಾನ ರಚಿಸಿ, ಪ್ರತಿಯೊಬ್ಬ ಪ್ರಜೆಗೂ ಸಮಾನ ಮತದಾನದ ಹಕ್ಕು ನೀಡುವ ಮೂಲಕ ಅಧಿಕಾರವನ್ನು ಬ್ಯಾಲೆಟ್ ಪೆಟ್ಟಿಗೆಯಿಂದ ನಿರ್ಧರಿಸುವಂತೆ ಮಾಡಿದರು. ಇಂದು ಸಾಮಾನ್ಯ ಗ್ರಾಮ ಪಂಚಾಯತಿ ಸದಸ್ಯನಿಂದ ಹಿಡಿದು ಮುಖ್ಯಮಂತ್ರಿ, ಪ್ರಧಾನಿ ಹಾಗೂ ರಾಷ್ಟ್ರಪತಿಗಳವರೆಗೆ ಎಲ್ಲರೂ ಪ್ರಜಾಪ್ರಭುತ್ವದ ಮತಪೆಟ್ಟಿಗೆಯ ಫಲವಾಗಿದ್ದಾರೆ ಎಂದು ಸಂವಿಧಾನ ಶಿಲ್ಪಿಯ ಕೊಡುಗೆಯನ್ನು ಸ್ಮರಿಸಿದರು.

ಬಾಬಾಸಾಹೇಬರು 2 ವರ್ಷ 11 ತಿಂಗಳು 18 ದಿನಗಳ ಕಾಲ ಕಠಿಣ ಪರಿಶ್ರಮ ವಹಿಸಿ ರಚಿಸಿದ ಸಂವಿಧಾನದಿಂದಾಗಿ ಇಂದು ನಮಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಮಾನತೆ ದೊರೆತಿದೆ. ಈ ಹಿನ್ನೆಲೆಯಲ್ಲಿ ಕಾಲೇಜುಗಳಲ್ಲಿ ಸಂವಿಧಾನ ಓದುವ ಕಾರ್ಯಕ್ರಮಗಳು ಹಾಗೂ ಯುವ ಸಂಸತ್ ಮಾದರಿಯ ಚಟುವಟಿಕೆಗಳು ಹೆಚ್ಚು ನಡೆಯಬೇಕಿದೆ ಎಂದು ಅಭಿಪ್ರಾಯಪಟ್ಟರು.

ಯುವಜನತೆ ಸಮಾಜಕ್ಕೆ ಹೆದರದೆ, ಬದಲಾಗಿ ಸಮಾಜವೇ ಗೌರವಿಸುವ ಮಟ್ಟಕ್ಕೆ ಜ್ಞಾನಾರ್ಜನೆ ಮಾಡಬೇಕು. ಕೇವಲ ರೀಲ್ಸ್ , ಸಾಮಾಜಿಕ ಜಾಲತಾಣಗಳಲ್ಲಿ ಸಮಯ ವ್ಯರ್ಥ ಮಾಡದೆ, ದೂರದೃಷ್ಟಿ, ಪ್ರಾಮಾಣಿಕತೆ, ಆತ್ಮವಿಶ್ವಾಸ, ಸಂವಹನ ಕಲೆ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಬಲಿಷ್ಠ ಪ್ರಜಾಪ್ರಭುತ್ವ ನಿರ್ಮಾಣಕ್ಕೆ ಕೈಜೋಡಿಸಬೇಕೆಂದು ಕರೆ ನೀಡಿದರು.

ಮಹಾನಗರ ಪಾಲಿಕೆ ಮಹಾಪೌರರಾದ ಪಿ. ಗಾದೆಪ್ಪ ಅವರು ಮಾತನಾಡಿ, ಇಂದು ನಾವೆಲ್ಲರೂ ಭಾರತದಲ್ಲಿ ಸ್ವತಂತ್ರವಾಗಿ, ನಿರಾಳವಾಗಿ ಹಾಗೂ ಸ್ವಇಚ್ಛೆಯಿಂದ ಜೀವಿಸಲು ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದ ತಂಡ ರಚಿಸಿದ ಸಂವಿಧಾನವೇ ಮೂಲ ಕಾರಣ ಎಂದು ಹೇಳಿದರು.

ದೇಶದ ಮುಂದಿನ ಪೀಳಿಗೆಯ ಉಜ್ವಲ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಬಾಬಾಸಾಹೇಬ್ ಅಂಬೇಡ್ಕರ್ ಅವರು ಊಟ, ನಿದ್ರೆ ಮತ್ತು ಮೂಲ ಸೌಕರ್ಯಗಳನ್ನೂ ಲೆಕ್ಕಿಸದೆ ಪಟ್ಟ ಕಷ್ಟ ಹಾಗೂ ಪರಿಶ್ರಮದ ಫಲವೇ ಇಂದಿನ ಸುಭದ್ರ ಭಾರತ ಎಂದರು. ಅವರ ತ್ಯಾಗ ಮತ್ತು ಆದರ್ಶಗಳನ್ನು ಯುವಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದು ಕರೆ ನೀಡಿದರು.

ಜಿಲ್ಲಾಧಿಕಾರಿ ಕೆ. ನಾಗೇಂದ್ರ ಪ್ರಸಾದ್ ಅವರು ಮಾತನಾಡಿ, ವಿಶ್ವದಲ್ಲೇ ಅತ್ಯುತ್ತಮವಾದ ಆಡಳಿತ ವ್ಯವಸ್ಥೆ ಎಂದರೆ ಅದು ಪ್ರಜಾಪ್ರಭುತ್ವ ಮಾತ್ರ. ಡಾ. ಬಿ.ಆರ್. ಅಂಬೇಡ್ಕರ್ ಅವರು ಎಲ್ಲ ಬಗೆಯ ಆಡಳಿತ ಮಾದರಿಗಳನ್ನು ಆಳವಾಗಿ ಅಧ್ಯಯನ ಮಾಡಿದ ನಂತರ, ಭಾರತಕ್ಕೆ ಪ್ರಜಾಪ್ರಭುತ್ವವೇ ಶ್ರೇಷ್ಠವೆಂದು ನಿಸ್ಸಂದೇಹವಾಗಿ ಶಿಫಾರಸು ಮಾಡಿದರು. ಸಂವಿಧಾನದ ಮೂಲಕ ಪ್ರತಿಯೊಬ್ಬ ನಾಗರಿಕನಿಗೂ ಯಾವುದೇ ತಾರತಮ್ಯವಿಲ್ಲದೆ 'ಒಬ್ಬ ವ್ಯಕ್ತಿ, ಒಂದು ಮತ' ಎಂಬ ಸಮಾನ ಹಕ್ಕನ್ನು ತಂದುಕೊಟ್ಟರು ಎಂದು ಹೇಳಿದರು.

ಪ್ರಜಾಪ್ರಭುತ್ವದಲ್ಲಿ ಜನರೇ ಕೇಂದ್ರಬಿಂದು. ಸರ್ಕಾರ ಬೇರೆ, ಪ್ರಜೆಗಳು ಬೇರೆ ಅಲ್ಲ; ಸರ್ಕಾರ ನಮ್ಮದೇ ಆಗಿದೆ. ಜನಪ್ರತಿನಿಧಿಗಳು ಅಥವಾ ಆಡಳಿತ ಸರಿಯಿಲ್ಲದಿದ್ದರೆ ಅವರನ್ನು ಬದಲಾಯಿಸುವ ಸಂಪೂರ್ಣ ಅಧಿಕಾರ ಪ್ರಜೆಗಳ ಕೈಯಲ್ಲಿದೆ. ಚುನಾವಣೆ ದಿನವನ್ನು ಕೇವಲ ರಜಾದಿನವೆಂದು ಭಾವಿಸಿ ಮನೆಯಲ್ಲಿ ಉಳಿಯದೆ, ಪ್ರತಿಯೊಬ್ಬರೂ ಮತ ಚಲಾಯಿಸುವ ಮೂಲಕ ಉತ್ತಮ ಸರ್ಕಾರ ಹಾಗೂ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು ಎಂದು ಕರೆ ನೀಡಿದರು.

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಜಾಗತಿಕ ಮಟ್ಟದಲ್ಲಿ ಪಸರಿಸಲು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಸೆಪ್ಟೆಂಬರ್ 15 ಅನ್ನು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನಾಗಿ ಘೋಷಿಸಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಪ್ರಜಾಸತ್ತಾತ್ಮಕ ಹಾಗೂ ಸಂಸದೀಯ ಕಲಾಪಗಳ ಬಗ್ಗೆ ಅರಿವು ಮೂಡಿಸಲು ಪ್ರಪ್ರಥಮ ಬಾರಿಗೆ 'ಯುವ ಸಂಸತ್' ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ವಿದ್ಯಾರ್ಥಿಗಳು ಇದರಲ್ಲಿ ಸಕ್ರಿಯವಾಗಿ ಭಾಗವಹಿಸಿ, ಮುಂಬರುವ ನವೆಂಬರ್ 26ರ 'ಸಂವಿಧಾನ ದಿನ'ವನ್ನು ಅರ್ಥಪೂರ್ಣವಾಗಿ ಆಚರಿಸಲು ಕೈಜೋಡಿಸಬೇಕೆಂದು ಆಶಿಸಿದರು.

ಜಿಲ್ಲಾ ಪಂಚಾಯತ್ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಪ್ರಜಾಪ್ರಭುತ್ವ ಎಂದರೆ ಕೇವಲ ಮತದಾನ ಮಾಡುವುದಷ್ಟೇ ಅಲ್ಲ, ಅದು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯವನ್ನು ಒಳಗೊಂಡಿರುತ್ತದೆ. ಅದರಲ್ಲಿಯೂ ಸಾಮಾಜಿಕ ನ್ಯಾಯವೇ ಪ್ರಜಾಪ್ರಭುತ್ವದ ನಿಜವಾದ ಜೀವಾಳವಾಗಿದೆ ಎಂದು ಹೇಳಿದರು.

ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳ ಜೊತೆಗೆ ನಾಗರಿಕರು ತಮ್ಮ ಮೂಲಭೂತ ಕರ್ತವ್ಯಗಳನ್ನು ಮರೆಯಬಾರದು. ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆದು ದೇಶದ ಆರ್ಥಿಕತೆಗೆ ಕೊಡುಗೆ ನೀಡಬೇಕು. ದೇಶದ ಭವಿಷ್ಯ ಯುವಜನತೆಯ ಕೈಯಲ್ಲಿದೆ ಎಂದು ತಿಳಿಸಿದರು.

ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಹಾಗೂ ಸಾರ್ವಜನಿಕ ಜೀವನದಲ್ಲಿ ಸಂವಿಧಾನದ ಮೌಲ್ಯಗಳನ್ನು ಗೌರವಿಸಿ ಪಾಲಿಸಿದಾಗ ಮಾತ್ರ ಭಾರತವು ವಿಶ್ವಗುರುವಾಗಲು ಮತ್ತು ಸುಸ್ಥಿರ ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕಂಪ್ಲಿಯ ಸರ್ಕಾರಿ ಪದವಿ ಪೂರ್ವ ಬಾಲಕರ ಕಾಲೇಜಿನ ಪ್ರಾಂಶುಪಾಲ ಸಿದ್ದಣ್ಣ ಪರಮೇಶ್ವರ್ ಅವರು ಪ್ರಜಾಪ್ರಭುತ್ವದ ಆಶಯಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಸಂವಿಧಾನ ಪ್ರಸ್ತಾವನೆಯನ್ನು ಬೋಧಿಸಲಾಯಿತು. ಇದಕ್ಕೂ ಮುನ್ನ ಗಣ್ಯರು 'ಯುವ ಸಂಸತ್ತು' ಭಿತ್ತಿಪತ್ರಗಳನ್ನು ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ. ಚಿದಾನಂದಪ್ಪ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಮಹಾನಗರ ಪಾಲಿಕೆಯ ಆಯುಕ್ತ ಪಿ.ಎಸ್.ಮಂಜುನಾಥ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ ಸೇರಿದಂತೆ ವಿವಿಧ ದಲಿತ ಸಂಘಟನೆಗಳ ಪದಾಧಿಕಾರಿಗಳು, ಮುಖಂಡರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಧರ್ಮ ರಕ್ಷಣೆ ದುಷ್ಟ ಶಕ್ತಿಗಳ ದಮನವೇ ವೀರಭದ್ರಸ್ವಾಮಿ ಅವತಾರದ ಮೂಲ ಉದ್ದೇಶ - ಶ್ರೀ ರಂಭಾಪುರಿ ಜಗದ್ಗುರುಗಳು.

ಹುಬ್ಬಳ್ಳಿ-ಸಪ್ಟಂಬರ್-17

ಸಮಾಜದಲ್ಲಿ ದುಷ್ಟ ಶಕ್ತಿಗಳು ಅಸಮಾನತೆ ಅಶಾಂತಿ ಮತ್ತು ಮೌಲ್ಯಗಳ ಕುಸಿತ ಹೆಚ್ಚುತ್ತಿರುವ ಸಂದರ್ಭದಲ್ಲಿ ವೀರಭದ್ರನ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ. ಯುವಕರು ಧರ್ಮದೊಂದಿಗೆ ಆಧುನಿಕ ಶಿಕ್ಷಣ ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರಪ್ರೇಮವನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ವಿದ್ಯಾನಗರದ ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಸಮುದಾಯ ಭವನದ ಆವರಣದಲ್ಲಿ ಜರುಗಿದ ಶ್ರೀ ವೀರಭದ್ರೇಶ್ವರ ಜಯಂತ್ಯುತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ವೀರಭದ್ರ ಎಂದರೆ ಕೇವಲ ಶಸ್ತ್ರಧಾರಿ ದೈವದ ರೂಪವಲ್ಲ. ಧರ್ಮ ರಕ್ಷಣೆ ದುಷ್ಟ ಶಕ್ತಿಗಳ ದಮನವೇ ವೀರಭದ್ರಸ್ವಾಮಿ ಅವತಾರದ ಮೂಲ ಉದ್ದೇಶವಾಗಿದೆ. ವಿವೇಕ ಧೈರ್ಯ ಶಿಸ್ತು ಕರ್ತವ್ಯನಿಷ್ಠೆ ಮತ್ತು ಧರ್ಮಬದ್ಧ ಜೀವನವೇ ನಿಜವಾದ ವೀರತ್ವ. ವೀರಭದ್ರೇಶ್ವರಸ್ವಾಮಿ ದೇವಾಲಯಗಳು ಕೇವಲ ಪೂಜಾ ಕೇಂದ್ರಗಳಲ್ಲ. ಅವು ನಮ್ಮ ಜನಪರ ಸಂಸ್ಕೃತಿ ಶೈವ ಪರಂಪರೆ ಕಲೆ ಆಚರಣೆ ಮತ್ತು ಸಮುದಾಯದ ಐತಿಹಾಸಿಕ ನೆನಪುಗಳನ್ನು ಉಳಿಸಿಕೊಂಡಿರುವ ಸಾಂಸ್ಕೃತಿಕ ಕೇಂದ್ರಗಳಾಗಿವೆ. ಶ್ರೀ ವೀರಭದ್ರಸ್ವಾಮಿ ರಂಭಾಪುರಿ ಪೀಠದ ಕ್ಷೇತ್ರನಾಥನಾಗಿ ಮತ್ತು ಗೋತ್ರ ಪುರುಷನಾಗಿ ಪೂಜೆಗೊಳ್ಳುತ್ತಿದ್ದಾನೆ. ನಾಡಿನ ಯಾವುದೇ ಭಾಗದಲ್ಲಿ ಶ್ರೀ ವೀರಭದ್ರಸ್ವಾಮಿ ನೆಲೆಗೊಂಡಿದ್ದರೂ ಅತನ ಮೂಲ ಶಕ್ತಿಕೇಂದ್ರ ರಂಭಾಪುರಿ ಕ್ಷೇತ್ರವಾಗಿದೆ. ಜಾತಿ ಪ್ರದೇಶ ಪಕ್ಷ ಭೇದಗಳನ್ನು ಮೀರಿ ಧರ್ಮ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳ ಆಧಾರದ ಮೇಲೆ ಸಮಾಜವನ್ನು ಕಟ್ಟುವ ಸಂಕಲ್ಪ ಜಯಂತ್ಯುತ್ಸವದಿಂದ ನಡೆಯಬೇಕೆಂಬ ಆಶಯ ನಮ್ಮದು. ವೀರಭದ್ರನ ಶೌರ್ಯ ನಮ್ಮಲ್ಲಿ ಧೈರ್ಯವನ್ನು ಶಿವನ ತತ್ವ ನಮ್ಮಲ್ಲಿ ಜ್ಞಾನವನ್ನು ಧರ್ಮದ ಮಾರ್ಗ ನಮ್ಮಲ್ಲಿ ಸದಾಚಾರವನ್ನು ಬೆಳೆಸಲೆಂದು ಆಶಿಸಿದರು.

ಸದಾನಂದ ಡಂಗನವರ, ಚಂದ್ರಶೇಖರ ಜುಟ್ಟಲ, ವಿ.ಜಿ.ಪಾಟೀಲ, ಆರ್.ಎಂ.ಹಿರೇಮಠ, ಬಂಗಾರೇಶ ಹಿರೇಮಠ, ಬಸವರಾಜ ಸುಳ್ಳದ, ಡಾ.ರಾಮು ಮೂಲಗಿ, ಸಂಶಿ ಉಮೇಶ, ಸುಮಂಗಲಾ ಹಿರೇಮಠ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು ಮ್ಯಾನೇಜರ್ ಜಿ.ವಿ.ಹಿರೇಮಠ ಸರ್ವರನ್ನು ಸ್ವಾಗತಿಸಿ ನಿರೂಪಿಸಿದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ



ಅಂಬೇಡ್ಕರ್ ಅವರ ಅಧ್ಯಯನವೆಂದರೆ ಜಗತ್ತಿನ ಪ್ರಗತಿಯ ಅಧ್ಯಯನ - ಡಾ. ಜಗನ್ನಾಥ ಹೆಬ್ಬಾಳೆ

ಬೀದರ್ ಸೆ 17

ಡಾ. ಬಿ.ಆರ್. ಅಂಬೇಡ್ಕರ್ ಅವರು ಕೇವಲ ದಲಿತ ಸಮುದಾಯದ ನಾಯಕರಲ್ಲ. ಅವರು ಇಡೀ ಮನುಕುಲದ ನಾಯಕರಾಗಿದ್ದು, ಭಾರತದ ಹೃದಯವೇ ಅಂಬೇಡ್ಕರ್ ಎಂದು ಬೀದರ್ ವಿಶ್ವವಿದ್ಯಾಲಯದ ವಿಶ್ರಾಂತ ಡೀನ್ ಪ್ರೊ. ಡಾ. ಜಗನ್ನಾಥ ಹೆಬ್ಬಾಳೆ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಮಂಗಳವಾರ ನಡೆದ 'ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮ' ಹಾಗೂ ಪ್ರಬಂಧ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರು ಅಪಾರ ಜ್ಞಾನ ಹೊಂದಿದ್ದ ಮಹಾನ್ ಚಿಂತಕರಾಗಿದ್ದರು. ಅವರೇ ಒಂದು ನಿಘಂಟಿನಂತಿದ್ದರು. ಅವರ ಮನೆಯಲ್ಲಿ ಸುಮಾರು 50 ಸಾವಿರ ಪುಸ್ತಕಗಳಿದ್ದವು ಎನ್ನುವುದು ಅವರ ಓದು ಮತ್ತು ಅಧ್ಯಯನದ ಆಳವನ್ನು ತೋರಿಸುತ್ತದೆ. ಪುಸ್ತಕ ಓದುವುದು ಮತ್ತು ಜ್ಞಾನ ಸಂಪಾದಿಸುವುದು ಅವರ ಜೀವನದ ಅವಿಭಾಜ್ಯ ಅಂಗವಾಗಿತ್ತು ಎಂದು ಹೇಳಿದರು.

ಸಹ ಶಿಕ್ಷಕ ಸಿಂಗೆ ಸೂರ್ಯಕಾಂತ ಅವರು 'ಡಾ. ಬಿ.ಆರ್. ಅಂಬೇಡ್ಕರ್ ಅವರ ಬದುಕು, ಬರಹ ಮತ್ತು ಸಾಧನೆ, ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಅವರು, ಡಾ. ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಜೀವನದಲ್ಲಿ ಎದುರಿಸಿದ ಅವಮಾನ, ಅಸ್ಪೃಶ್ಯತೆ ಹಾಗೂ ಸಾಮಾಜಿಕ ಅಪಮಾನಗಳನ್ನು ಮೆಟ್ಟಿನಿಂತು, ತಮ್ಮ ಛಲವನ್ನು ಎಂದಿಗೂ ಬಿಡದೆ ದೇಶದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗಬೇಕು ಎಂಬ ಉದ್ದೇಶದಿಂದ ಸಂವಿಧಾನ ರಚಿಸಿ ಭವ್ಯ ಭಾರತಕ್ಕೆ ಅರ್ಪಿಸಿದ್ದಾರೆ ಎಂದು ಸಹ ಶಿಕ್ಷಕ ಸಿಂಗೆ ಸೂರ್ಯಕಾಂತ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ರಾಮ ಸಿಂಧೆ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಕಾರ್ಯಕ್ರಮವು ಶಾಲಾ ಕಾಲೇಜುಗಳಲ್ಲಿ ಮಾಡುವುದರಿಂದ ಮಕ್ಕಳಲ್ಲಿ ಅಂಬೇಡ್ಕರ್ ಅವರ ವಿಚಾರ ಧಾರೆಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಮೂಲಕ ಸಮಾನತೆ, ಸಾಮಾಜಿಕ ನ್ಯಾಯ, ಶಿಕ್ಷಣದ ಮಹತ್ವ ಹಾಗೂ ಸಂವಿಧಾನದ ಆಶಯಗಳ ಕುರಿತು ಅರಿವು ಮೂಡಿಸಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ. ಸರ್ಕಾರ ರೂಪಿಸಿರುವ ಇಂತಹ ಮಹತ್ವದ ಕಾರ್ಯಕ್ರಮಗಳ ಸ'ದ'ಎಪ'ಯೋೀಗ'ವ'ನ'ು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಸರಕಾರಿ ಪದವಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶ'ುಪಾಲರಾದ' ವಿಜಯಕುಮಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಕಾಲೇಜಿನ ಪ್ರೌಢ ವಿಭಾಗದ ಉಪ ಪ್ರಾಂಶುಪಾಲ ಗುಂಡಪ್ಪ ಹುಡಗೆ, ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪ ಪ್ರಾಂಶುಪಾಲ ಜಗದೇವಿ ಭೋಸ್ಲೆ, ಮೌಲಾನ ಅಬುಲ್ ಕಲಾಂ ಆಜಾದ್ ಶಾಲೆಯ ಪ್ರಾಚಾರ್ಯ ನಾಗನಾಥ ಪಾಟೀಲ್, ಜಾನಪದ ಗಾನಕೋಗಿಲೆ ಖ್ಯಾತಿಯ ಕಲಾವಿದ ಶಂಭುಲಿಂಗ ವಾಲ್ದೊಡ್ಡಿ, ಕುಮಾರಿ. ಕ್ಸೈಮೆಂಟಿನಾ, ಇತರರು ವೇದಿಕೆ ಮೇಲಿದ್ದರು.

ಪ್ರಾರಂಭದಲ್ಲಿ ಸಂಜುಕುಮಾರ ಸ್ವಾಗತಿಸಿದರು, ಬಸವರಾಜ್ ಮಯೂರ್ ನಿರೂಪಿಸಿದರೆ, ಮಹಮ್ಮದ್ ಮಾಜೀದ್ ವಂದಿಸಿದರು.

ಅದೇ ಸಂದರ್ಭದಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಾದ ಸುಪ್ರಿಯಾ ಸಂಜುಕುಮಾರ ಪ್ರಥಮ ಸ್ಥಾನ, ನಂದಿನಿ ಪಾಂಡುರಂಗ ದ್ವಿತೀಯ ಸ್ಥಾನ, ಅಂಕಿತ ಅನಿಲ್ ತೃತೀಯ ಸ್ಥಾನ ಪಡೆದರೆ, ಸುಮಾ ದೀಪಕ, ಭಾಗ್ಯಲಕ್ಷ್ಮೀ ಹನುಮಂತ್ ಅವರಿಗೆ ಸಮಾಧಾನಕರ ಬಹುಮಾನಗಳನ್ನು ಪುಸ್ತಕ ರೂಪದಲ್ಲಿ ನೀಡಿ, ಪ್ರಮಾಣ ಪತ್ರ ವಿತರಿಸಲಾಯಿತು. ಬಸವರಾಜ ಮಯೂರ ಮತ್ತು ಚಂದ್ರಕಲಾ ಬಿರಾದಾರ ಅವರು ನಿರ್ಣಾಯಕ'ರಾಗಿ ಕಾರ್ಯನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿಗಳಾದ ಗುರುರಾಜ್, ಪ್ರವೀಣ ಹಾಗೂ ಕಾಲೇಜಿನ ಉಪನ್ಯಾಸಕರು ಮಕ್ಕಳು ಉಪಸ್ಥಿತರಿದ್ದರು.

ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ:ಯುವ ಸಂಸತ್ ಸ್ಪರ್ಧೆಗೆ ಚಾಲನೆ

ಸಂವಿಧಾನದ ಮೌಲ್ಯಗಳನ್ನು ಯುವಜನತೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು: ಶಾಸಕ ರಾಘವೇಂದ್ರ ಹಿಟ್ನಾಳ್

ಕೊಪ್ಪಳ ಸೆ.15-

ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನದಿಂದಾಗಿ ಇಂದು ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಯಾಗಿ ನಿಂತಿದೆ. ಸಂವಿಧಾನ ನೀಡಿದ ಹಕ್ಕು ಮತ್ತು ಮೌಲ್ಯಗಳನ್ನು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ರಾಘು ವೇಂದ್ರ ಹಿಟ್ನಾಳ್ ಅವರು ಹೇಳಿ ದರು.

ಮಂಗಳವಾರದಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೊಪ್ಪಳ ಹಾಗೂ ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ-2026 ರ ಪ್ರಯುಕ್ತ ಆಯೋಜಿಸಿದ್ದ ತಾಲೂಕು ಮಟ್ಟದ ಹಾಗೂ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ ಗಳಿಗೆ ಚಾಲನೆ ನೀಡುವ ಕಾರ್ಯಕ್ರಮ ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಯುವಕರು ಮತ್ತು ವಿದ್ಯಾರ್ಥಿಗಳು ಕೇವಲ ಪದವಿ ಪಡೆಯುವುದಕ್ಕೆ ಸೀಮಿತವಾಗದೆ, ದೇಶದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ (ಸ್ಥಳೀಯ ಸಂಸ್ಥೆಗಳಿಂದ ಸಂಸತ್ತಿನವರೆಗೆ) ಹಾಗೂ ಸಾಮಾನ್ಯ ಜ್ಞಾನವನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ.

ಸರ್ಕಾರದ ವತಿಯಿಂದ ಸಂವಿಧಾನದ ಪೀಠಿಕೆಯನ್ನು ಓದಿಸುವ ಮೂಲಕ ಅದರ ಆಶಯ ಮತ್ತು ಸಾರಾಂಶವನ್ನು ಪ್ರತಿಯೊಬ್ಬರಿಗೂ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ದೇಶದ ಸರ್ವತೋಮುಖ ಅಭಿವೃದ್ಧಿ ಯುವಕರ ಕೈಯಲ್ಲಿದ್ದು, ಸಂಸತ್ ಸ್ಪರ್ಧೆಗಳಂತಹ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಅನುಭವವನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಹೇಳಿದರು.



ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಮಾತನಾಡಿ, ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಹಕ್ಕು ಮತ್ತು ಕರ್ತವ್ಯಗಳನ್ನು ಒದಗಿಸಿದೆ. ಅಂಬೇಡ್ಕರ್ ಅವರ ಕೊಡುಗೆಯನ್ನು ಸ್ಮರಿಸುತ್ತಾ, ಪ್ರಜಾಪ್ರಭುತ್ವ ಎಂದರೆ ಜನರ ಮಾತು, ಹಕ್ಕುಗಳು ಹಾಗೂ ಅಭಿವೃದ್ಧಿಗೆ ಸ್ಪಂದಿಸುವುದಾಗಿದೆ ಎಂದು ತಿಳಿಸಿದರು. ಶಾಸಕಾಂಗದ ಕಾರ್ಯಕಲಾಪಗಳು, ಕಾಯ್ದೆ ಮತ್ತು ಬಿಲ್‌ಗಳ ಚರ್ಚೆಗಳ ಬಗ್ಗೆ ಮಕ್ಕಳಿಗೆ ಪ್ರತ್ಯಕ್ಷ ಅರಿವು ಮೂಡಿ ಸಲು ಮುಂದಿನ ಡಿಸೆಂಬರ್‌ನಲ್ಲಿ ನಡೆಯುವ ಅಧಿವೇಶನಕ್ಕೆ ಕೊಪ್ಪಳ ಜಿಲ್ಲೆಯ ಶಾಲಾ ಮಕ್ಕಳನ್ನು ಕರೆದೊಯ್ಯುವ ಯೋಜನೆ ಇದೆ. ಸಂವಿಧಾನದಲ್ಲಿ ಮಹಿಳೆಯರಿಗೆ ಮೀಸಲಾತಿ ಇದ್ದರೂ, ಪ್ರಾತಿನಿಧ್ಯ ಪಡೆಯಲು ಕಠಿಣ ಪರಿಶ್ರಮ ಅಗತ್ಯ. ತಮ್ಮ ಸ್ವಂತ ರಾಜಕೀಯ ಪಯಣ ಹಾಗೂ ಹೆಲಿಕಾಪ್ಟರ್ ಮೂಲಕ ನಾಮಪತ್ರ ಸಲ್ಲಿಕೆಗೆ ತೆರಳಿದ ಪ್ರಸಂಗವನ್ನು ಹಂಚಿಕೊಳ್ಳುತ್ತಾ, ವಿದ್ಯಾರ್ಥಿನಿಯರು ಶಿಕ್ಷಣದ ಮೂಲಕ ಉನ್ನತ ಹಂತಕ್ಕೇರಲು ಕರೆ ನೀಡಿದರು. ವಸತಿ ಶಾಲೆಗಳಲ್ಲಿ ಗ್ರಂಥಾಲಯ, ಗುಣಮಟ್ಟದ ಆಹಾರ ಹಾಗೂ ಮೂಲ ಸೌಕರ್ಯಗಳ ಕೊರತೆಯಿದ್ದರೆ ಧೈರ್ಯವಾಗಿ ಪ್ರಶ್ನಿಸಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದರು. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಸೃಜನಶೀಲ ಹಾಗೂ ಒಳಿತಿನ ಕಾರ್ಯಗಳಿಗೆ ಮಾತ್ರ ಬಳಸಬೇಕು; ದುರ್ಬಳಕೆ ಮಾಡಿಕೊಳ್ಳಬಾರದು. ಕೇವಲ ಪದವಿ ಪಡೆಯುವುದಷ್ಟೇ ಅಲ್ಲದೇ, ಕಲಿಕೆಯ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ಶಿಕ್ಷಕರು ಹಾಗೂ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕೆಂದು ಅವರು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ್ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಮೂಲಕ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನತೆ, ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ (ಆರ್ಟಿಕಲ್ 19) ದೊರೆತಿದೆ. ಪ್ರಜಾಪ್ರಭುತ್ವ ಎಂದರೆ ಕೇವಲ ಮತದಾನಕ್ಕೆ ಸೀಮಿತವಾಗಿರದೆ, ಪ್ರತಿಯೊಬ್ಬರು ಭಾಗವಹಿಸುವ ಪ್ರಕ್ರಿಯೆಯಾಗಿದೆ. ವಿದ್ಯಾರ್ಥಿಗಳಲ್ಲಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಕಾರ್ಯಾಚರಣೆಯ ಬಗ್ಗೆ ಅರಿವು ಮೂಡಿಸಲು ಈ ವರ್ಷ ಶಾಲಾ, ತಾಲೂಕು ಮತ್ತು ಕಾಲೇಜು ಮಟ್ಟದಲ್ಲಿ ಯುವ ಸಂಸತ್' ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದೆ. ವಿದ್ಯಾರ್ಥಿಗಳು ಸೋಶಿಯಲ್ ಮೀಡಿಯಾ ಮತ್ತು ರೀಲ್ಸ್ ಗಳಿಗೆ ಮಾತ್ರ ಸೀಮಿತವಾಗದೆ ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕುಗಳು ಹಾಗೂ ಮೂಲಭೂತ ಕರ್ತವ್ಯಗಳ ಬಗ್ಗೆ ತಿಳಿದುಕೊಂಡು ಜವಾಬ್ದಾರಿಯುತ ಪ್ರಜೆಗಳಾಗಬೇಕೆಂದು ಕರೆ ನೀಡಿದರು. ಕಾರ್ಯಕ್ರಮದ ಉಪನ್ಯಾ ಸದಲ್ಲಿ ಮಾತನಾಡಿದ ಮಂಗಳೂರು ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರಭುರಾಜ ನಾಯಕ ಅವರು, ಪ್ರಜಾಪ್ರಭುತ್ವವು ಕೇವಲ ರಾಜಕೀ ಯವಲ್ಲ, ಅದೊಂದು ಜೀವನ ಮಾರ್ಗ. ಪ್ರಜಾಪ್ರಭುತ್ವ ಎಂದರೆ ಕೇವಲ ಬಹುಮತದ ಆಡಳಿತ ಅಥವಾ ವೋಟ್ ಹಾಕಿ ಶಾಸನ ಸಭೆಯಲ್ಲಿ ಚರ್ಚೆ ಮಾಡುವುದಷ್ಟೇ ಅಲ್ಲ, ಅದೊಂದು ಸುಸ್ಥಿರ ಜೀವನ ಮಾರ್ಗ ಮತ್ತು ಪದ್ಧತಿಯಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಪ್ರಜಾಪ್ರಭುತ್ವವನ್ನು ಸಾಮಾಜಿಕ ಮತ್ತು ಆರ್ಥಿಕ ವಲಯಗಳಿಗೆ ವಿಸ್ತರಿಸಿ ನೈಜ ವ್ಯಾಖ್ಯಾನ ನೀಡಿದ್ದಾರೆ. ಪ್ರಜಾಪ್ರಭುತ್ವ ಎಂದರೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ವೈಜ್ಞಾನಿಕ ಮನೋಭಾವ, ಜಾತ್ಯತೀತತೆ ಹಾಗೂ ಇತರರ ವಿಚಾರಗಳನ್ನು ಗೌರವಿಸುವ ಸಂಗತಿಯಾಗಿದೆ. ಪ್ರಜಾಪ್ರಭುತ್ವದ ಬೇರುಗಳು ಗಟ್ಟಿಯಾಗಲು ಕುಟುಂಬವೇ ಮೊದಲ ಪಾಠಶಾಲೆಯಾಗಬೇಕು. ಜೊತೆಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಚುನಾಯಿತ ಪ್ರತಿನಿಧಿಗಳಿಗೆ ಸೂಕ್ತ ನಾಯಕತ್ವ ಹಾಗೂ ಸಾರ್ವಜನಿಕ ಸೇವೆಯ ತರಬೇತಿ ನೀಡುವ ಶಾಲೆಗಳು ಆರಂಭವಾಗಬೇಕಿದೆ. ಇಂಗ್ಲೆಂಡ್ ದೇಶಕ್ಕಿಂತಲೂ ಮುಂಚಿತವಾಗಿ 12ನೇ ಶತಮಾನದಲ್ಲೇ ನಮ್ಮ ಶರಣರು ಬಸವಣ್ಣನವರ ನಾಯಕತ್ವದಲ್ಲಿ 'ಅನುಭವ ಮಂಟಪ'ದ ಮೂಲಕ ಜಾಗತಿಕ ಪ್ರಜಾಪ್ರಭುತ್ವದ ಕಲ್ಪನೆಯನ್ನು ನೀಡಿದ್ದರು. ಇಂದಿನ ಯುವಜನತೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೊಗಲದ ಸಂವಿಧಾನ ಪೀಠಿಕೆಯನ್ನು ಬೋಧಿಸಿದರು. ಯುವ ಸಂಸತ್ ಸ್ಪರ್ಧೆ ಕುರಿತಾದ ಪೋಸ್ಟರ್‌ಗಳನ್ನು ವೇದಿಕೆ ಮೇಲಿನ ಗಣ್ಯರು ಬಿಡುಗಡೆಗೊಳಿಸಿದರು. ಗಾಯಕರಾದ ಹನುಮಂತಪ್ಪ ಬಡಿಗೇರ ಹಾಗೂ ಸಂಗಡಿಗರು ನಾಡಗೀತೆ ಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರಸನ್ನ ಗಡಾದ್, ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿ ಟಿ.ಕೃಷ್ಣಮೂರ್ತಿ, ಭಾಗ್ಯನಗರ ಪಟ್ಟಣ ಪಂಚಾಯತಿ ಅಧ್ಯಕ್ಷರಾದ ರಮೇಶ ಹ್ಯಾಟಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಮಂಜುನಾಥ ಗೊಂಡಬಾಳ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಇತರೆ ಮುಖಂಡರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಕಲ್ಯಾಣ ಕರ್ನಾಟಕ ಭಾಗದ ಇತಿಹಾಸವೇ ಕರ್ನಾಟಕದ ಇತಿಹಾಸವಾಗಬೇಕು: ಸಿಎಂ

ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳೊಂದಿಗೆ ನಗರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಕಾರ್ಯಕ್ರಮದಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಸಚಿವ ಡಾ.ಅಜಯ್ ಸಿಂಗ್, ತಿಪ್ಪಣ್ಣಪ್ಪ ಕಮಕನೂರ, ಅಲ್ಲಮಪ್ರಭು ಪಾಟೀಲ್, ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ಶೇಖ್ ಅಜ್ಮಲ್ ಅಹಮದ್ ಗೋಳಾ, ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಲ್ಯಾಣ ಕರ್ನಾಟಕಕ್ಕೆ ಕೇಂದ್ರದಿಂದ 5 ಸಾವಿರ ಕೋಟಿ ನೀಡಲಿ: ಸಚಿವ ಅಜಯ್‌ಸಿಂಗ್ ಆಗ್ರಹ

ಸಾಥ್ ನೀಡಬಾರದು? ಎಂದು ಪ್ರಶ್ನಿಸಿದರು.

ಕೆಪಿಎಸ್‌ಸಿ ನೇಮಕಾತಿ ಆರೋಪ: ಬಿಜೆಪಿಯ ಬಳಿ ದಾ ಖಲೆಗಳಿಲ್ಲ ಕೆಪಿಎಸ್‌ಸಿ ನೇಮ ಕಾತಿ ಹಗರಣದ ವಿಚಾರದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಬೇಕು ಎಂಬ ಬಿಜೆಪಿ ನಾಯಕರ ಹೇಳಿ ಕೆಗಳಿಗೆ ಪ್ರತಿಕ್ರಿಯಿಸಿದ ಅಜಯ್ ಧರಂಸಿಂಗ್, ಬಿಜೆಪಿ ನಾಯಕರ ಬಳಿ ಯಾವುದೇ ದಾಖಲೆಗಳಿಲ್ಲ ಎಂದು ಹೇಳಿದರು.

ಬಿಜೆಪಿ ನಾಯಕರು ಕಳೆದ ಒಂದು ತಿಂಗಳು, 15 ದಿನಗಳಿ ಂದ ಈ ಕುರಿತು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಆದರೆ ಇದುವ ರೆಗೆ ಯಾವುದೇ ದಾಖಲೆಗಳನ್ನು ಬಹಿರಂಗಪಡಿಸಿಲ್ಲ. ಪ್ರಿಯಾಂಕ್ ಖರ್ಗೆ ಅವರು ತಮ್ಮ ನಿಲುವಿನ ಬಗ್ಗೆ ಸ್ಪಷ್ಟನೆಯನ್ನೂ ನೀಡಿ ದ್ದಾರೆ. ಕೇವಲ ಪ್ರಚಾರಕ್ಕಾಗಿ ಆರೋಪ ಮಾಡಲಾಗುತ್ತಿದೆ ಎಂದು ಹೇಳಿದರು.

ಹಿಂದೆ ಕುಮಾರಸ್ವಾಮಿ ತಮ್ಮ ಬಳಿ ಸಿಡಿ ಹಾಗೂ ಪೆನ್ ಡ್ರೈವ್ ಇದೆ ಎಂದು ಹೇಳಿದ್ದರು. ಆದರೆ ಯಾವುದೇ ಸಿಡಿ ಅಥ ವಾ ಪೆನ್‌ಡ್ರೈವ್ ಹೊರಬರಲಿಲ್ಲ. ಈಗ ಆರೋಪ ಮಾಡುತ್ತಿರುವವರೇ "ಹಿಟ್ ವಿಕೆಟ್" ಆಗು ತ್ತಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಎನ್. ಎಸ್. ಭೋಸರಾಜು ಹಾಗೂ ಎ. ವಸಂತಕುಮಾರ್, ಜಿಲ್ಲಾಧಿ ಕಾರಿ ಪೂವಿತಾ ಎಸ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಶು ಗಿರಿ, ರಾಯಚೂರು ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಾಪಾತ್ರ, ಐಎಎಸ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ್ ಕಂದು ಸೇರಿದಂತೆ ಜನಪ್ರತಿನಿಧಿ ಗಳು ಹಾಗೂ ವಿವಿಧ ಇಲಾಖೆ ಗಳ ಅಧಿಕಾರಿಗಳು ಉಪಸ್ಥಿತರಿ ದ್ದರು.

ಸಿರವಾರದಲ್ಲಿ ಅರ್ಥಪೂರ್ಣವಾಗಿ ಜರುಗಿದ ವಿಶ್ವಕರ್ಮ ಜಯಂತಿ; ಆದಿಶಿಲ್ಪಿಯ ಕೊಡುಗೆ ಸ್ಮರಣೆ

ದೈವಿಕ ಆಯುಧಗಳು ಹಾಗೂ ದೇವಾಲಯಗಳು: ಜಗನ್ನಾಥ ಪುರಿಯ ಜಗನ್ನಾಥ ದೇವಾಲಯ, ಪುಷ್ಪಕ ವಿಮಾನ, ದೇವತೆಗಳ ಅರಮನೆಗಳು, ಕರ್ಣನ ಕುಂಡಲಗಳು, ವಿಷ್ಣುವಿನ ಸುದರ್ಶನ ಚಕ್ರ ಹಾಗೂ ಶಿವನ ತ್ರಿಶೂಲವನ್ನು ಭಗವಾನ್ ವಿಶ್ವಕರ್ಮ ನಿರ್ಮಿಸಿದ್ದಾರೆ ಎಂಬ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯನ್ನು ನೆನೆಯಲಾಯಿತು.

ಪ್ರತಿವರ್ಷ ವಿಶ್ವಕರ್ಮ ಜನ್ಮ ವಾರ್ಷಿಕೋತ್ಸ ವದ ದಿನದಂದು ಉಪಕರಣಗಳು, ಯಂತ್ರಗಳು ಮತ್ತು ಕೈಗಾರಿಕಾ ಘಟಕಗಳನ್ನು ಪೂಜಿಸಿ ಕೃತಜ್ಞತೆ ಸಲ್ಲಿಸುವುದು ಭಾರತೀಯ ಸಂಪ್ರದಾಯದಲ್ಲಿ ರೂಢಿಯಲ್ಲಿದೆ ಎಂದು ಈ ವೇಳೆ ತಿಳಿಸಲಾಯಿತು.

ಜೋಳ ಖರೀದಿ ಹಣ ಪಾವತಿಯಲ್ಲಿ ಆದ ವಿಳಂಬದ ಕುರಿತು ಸತ್ಯಾಸತ್ಯತೆ ಅರಿಯಬೇಕು

ಟಿಎಂಸಿ ನೀರನ್ನು ಕಾಯ್ದಿರಿಸಿ, ಉಳಿದ ನೀರನ್ನು ಕಾಲುವೆಗಳಿಗೆ ಹರಿಸಲಾಗುತ್ತಿದೆ. ರಾಯಚೂರು ಜಿಲ್ಲೆಗೆ ಬರುವ ಎಡದಂಡೆ ಕಾಲುವೆಗೆ ಪ್ರತಿದಿನ ಸುಮಾರು 1 ಟಿಎಂಸಿ ನೀರು ಹರಿಸಲಾಗುತ್ತಿದ್ದರೂ, ರೈತರು ಹತ್ತಿ, ಜೋಳ, ಗೋಧಿ ಬದಲಿಗೆ ಹೆಚ್ಚಾಗಿ ಭತ್ತ ಬೆಳೆಯುತ್ತಿರುವುದರಿಂದ ಕೆಳಭಾಗದ ರೈತರ ಜಮೀನುಗಳಿಗೆ ನೀರು ತಲುಪುವಲ್ಲಿ ಸಮಸ್ಯೆಯಾಗುತ್ತಿದೆ ಎಂದು ಹೇಳಿದರು.

ಈ ಕುರಿತು ಕೊಪ್ಪಳ ಮತ್ತು ರಾಯಚೂರು ಜಿಲ್ಲಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ ಸಭೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಕವಿತಾಳ ಮತ್ತು ಸಿರವಾರ ತಾಲೂಕುಗಳಲ್ಲಿ ರಿಂಗ್ ರೋಡ್ ಕಾಮಗಾರಿಗಳಿಗೆ ಮಂಜೂರಾತಿ ದೊರೆತಿದ್ದು, ಮುಂದಿನ ದಿನಗಳಲ್ಲಿ ಮಾನ್ವಿಗೂ ರಿಂಗ್ ರೋಡ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿಲ್ಲೆಯಲ್ಲಿ ಹತ್ತಿ ಖರೀದಿ ಕೇಂದ್ರ ಆರಂಭಿಸುವಂತೆ ರಾಜ್ಯ ಸರ್ಕಾರದಿಂದ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ತುಂಗಭದ್ರ ನದಿ ನೀರಿನಲ್ಲಿ ಆಂಧ್ರಪ್ರದೇಶ ಮತ್ತು ತೆಲಂಗಾಣಕ್ಕೆ 16 ಟಿಎಂಸಿ ನೀರು ಬಿಡಬೇಕಾಗಿದ್ದು, ನದಿ ಪಾತ್ರದಲ್ಲಿ ಬೆಳೆ ಇಲ್ಲದ ಕಾರಣ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಮಾತ್ರ ನೀರು ಪಡೆಯುವುದಾಗಿ ಆಂಧ್ರ ಸರ್ಕಾರ ತಿಳಿಸಿದೆ. ಇದರಿಂದ ರಾಜ್ಯದ ಪಾಲಿನ ಸುಮಾರು ಅರ್ಧ ಟಿಎಂಸಿ ನೀರನ್ನು ಬೇಸಿಗೆಯಲ್ಲಿ ಕುಡಿಯುವ ಉದ್ದೇಶಕ್ಕೆ ಬಳಸಿಕೊಳ್ಳಲು ಅವಕಾಶ ದೊರೆಯಲಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಈ ಭಾಗದ ನೀರಾವರಿ ಸಮಸ್ಯೆ ಪರಿಹಾರಕ್ಕಾಗಿ ಕವಿತಾಳ ಸಮೀಪ ಜಲಾಶಯ ನಿರ್ಮಿಸಿ ಕೃಷ್ಣಾ ನದಿ ನೀರನ್ನು ಸಂಗ್ರಹಿಸಿ 76, 85 ಹಾಗೂ 89ನೇ ಉಪಕಾಲುವೆಗಳಿಗೆ ನೀರು ಹರಿಸುವ ಯೋಜನೆ ರೂಪಿಸಲಾಗುತ್ತಿದೆ. ಮಾನ್ವಿ ಪಟ್ಟಣದ ಕೆರೆಯಲ್ಲಿ ಪ್ರಸ್ತುತ 4.5 ಮೀಟರ್ ನೀರು ಸಂಗ್ರಹವಿದ್ದು, ಕಾತರಕಿ ನದಿಯಿಂದ ರಬಣಕಲ್ ಕೆರೆಗೆ ಹೊಸ ಪೈಪ್‌ಲೈನ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು. ಅಮೃತ್-2 ಯೋಜನೆಯಡಿ ನಡೆಯುತ್ತಿರುವ ಪೈಪ್‌ಲೈನ್ ಕಾಮಗಾರಿ ಯನ್ನು ಇನ್ನೂ ಎರಡು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಹಂಪಯ್ಯ ನಾಯಕ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅಬ್ದುಲ್ ಗಫೂರ್ ಸಾಬ್, ಬಿ.ಕೆ.ಅಮರೇಶಪ್ಪ, ಖಾಲಿದ್ ಖಾದ್ರಿ ಹಾಗೂ ರೌಡೂರು ಮಹಾಂತೇಶ ಸ್ವಾಮಿ ಉಪಸ್ಥಿತರಿದ್ದರು.

ನಾಗಡದಿನ್ನಿ ಶಾಲೆಯಲ್ಲಿ 30 ವರ್ಷ ಸೇವೆ ಸಲ್ಲಿಸಿದ ಶಿಕ್ಷಕ ವಿಜಯಕುಮಾರ್‌ಗೆ ಬೀಳ್ಕೊಡುಗೆ

ಸಾಧ್ಯವಿಲ್ಲ. ಗುರು ಹಿರಿಯರನ್ನು ಗೌರವಿಸುವ ಸಮಾಜವು ಸಂಸ್ಕಾರಯುತವಾಗಿ, ಸದೃಢವಾಗಿ ಬೆಳೆಯುತ್ತದೆ. ನಮ್ಮ ಸಂಸ್ಥೆಯ ವತಿಯಿಂದ ಸಾಧಕರನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬರಲಾಗುತ್ತಿದೆ ಎಂದರು.

ವರ್ಗಾವಣೆಗೊಂಡ ಶಿಕ್ಷಕ ವಿಜಯಕುಮಾರ್ ಕುರಿತು ವಿದ್ಯಾರ್ಥಿಗಳು ಅನಿಸಿಕೆ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಎಸ್ ಡಿಎಂಸಿ ಅಧ್ಯಕ್ಷ ಸೂಫಿಯಾ ಬೇಗಮ್ ಮಹಮ್ಮದ್ ಸಾಬ್ ಕರಿಗುಡ್ಡ, ಸೋಮಶೇಖರ ನಾಯಕ, ಬೂದಿಬಸವ, ಹನುಮಂತರಾಯ, ವಿಜಯಕುಮಾ್ರ ಚಂದ್ರಕಾಂತ, ಹನುಮಂತರಾಯ, ಸಿದ್ದಲಿಂಗ, ಶ್ವೇತ, ಸುನಿತಾ, ಭಾರ್ಗವಿ, ಅನುರಾಧ, ಹನುಮಂತಿ, ಮಹಮ್ಮದ್ ರಫಿ, ವಿಜಯಶಂಕರ ಸೇರಿದಂತೆ ಶಿಕ್ಷಕ ಶಿಕ್ಷಕಿಯರು ವಿದ್ಯಾರ್ಥಿಗಳು ಇದ್ದರು.

ಸಿರವಾರ: ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆ

ಪರಿಸ್ಥಿತಿಯನ್ನು ಹತೋಟಿಗೆ ತರಲು ಭಾರತ ಸರ್ಕಾರವು 1948ರ ಸೆಪ್ಟೆಂಬರ್‌ನಲ್ಲಿ ''ಆಪರೇಷನ್ ಪೋಲೊ'' ( ) ಎಂಬ ಹೆಸರಿನಲ್ಲಿ ಯಶಸ್ವಿ ಪೊಲೀಸ್ ಕಾರ್ಯಾಚರಣೆಯನ್ನು ಕೈಗೊಂಡಿತು.

ಫಲಿತವಾಗಿ, 1948ರ ಸೆಪ್ಟೆಂಬರ್ 17 ರಂದು ನಿಜಾಮರ ಅಧಿಪತ್ಯ ಅಂತ್ಯಗೊಂಡು, ಹೈದರಾಬಾದ್ ಸಂಸ್ಥಾನವು ಭಾರತೀಯ ಒಕ್ಕೂಟದೊಂದಿಗೆ ಅಧಿಕೃತವಾಗಿ ವಿಲೀನಗೊಂಡಿತು. ಈ ಐತಿಹಾಸಿಕ ಘಟನೆಯ ನೆನಪಿಗಾಗಿ ಪ್ರತಿ ವರ್ಷ ಈ ದಿನವನ್ನು ವಿಮೋಚನ ದಿನವನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಮರುನಾಮಕರಣದ ಸಂಭ್ರಮದೊಂದಿಗೆ, ಈ ಐತಿಹಾಸಿಕ ಪ್ರದೇಶವನ್ನು ಈಗ ಹೆಮ್ಮೆಯಿಂದ ''ಕಲ್ಯಾಣ ಕರ್ನಾಟಕ'' ಎಂದು ಕರೆಯಲಾಗುತ್ತದೆ.

ಈ ದಿನವು ನಮ್ಮ ನಾಡಿನ ಹಿರಿಯರ ತ್ಯಾಗ-ಬಲಿದಾನಗಳನ್ನು ಸ್ಮರಿಸುತ್ತಾ, ಭಾರತದ ಏಕತೆಯನ್ನು ಸಾರುವ ಮಹತ್ವದ ದಿನವಾಗಿದೆ ಎಂದು ತಿಳಿಸಿ, ನೆರೆದಿದ್ದ ಎಲ್ಲರಿಗೂ ವಿಮೋಚನಾ ದಿನದ ಶುಭಾಶಯಗಳನ್ನು ಕೋರಿದರು.ಈ ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯತ್‌ನ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ವಿಮೋಚನಾ ದಿನ : ಗೃಹರಕ್ಷಕ ದಳದಿಂದ ಸಿಬ್ಬಂದಿಗೆ ರೂ.2.10 ಲಕ್ಷ ಆರ್ಥಿಕ ನೆರವು

ರಾಯಚೂರು,ಸೆ.17– ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ ಅಂಗವಾಗಿ ರಾಯಚೂ ರು ಜಿಲ್ಲಾ ಗೃಹರಕ್ಷಕ ದಳದ ವತಿಯಿಂದ ಸಿಬ್ಬಂದಿ ಹಾಗೂ ಅವರ ಕುಟುಂಬದ ಸದಸ್ಯರಿಗೆ ಆರ್ಥಿಕ ನೆರವು ನೀಡುವ ಜೊತೆ ಗೆ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಗೃಹರಕ್ಷಕ ದಳದ ಸಿಬ್ಬಂದಿ ಹಾಗೂ ಅವರ ಕುಟು ಂಬದ ಸದಸ್ಯರಿಗೆ ನೆರವಾಗುವ ಉದ್ದೇಶದಿಂದ ಈ ಸಂದರ್ಭ ದಲ್ಲಿ ವಿವಿಧ ಮೊತ್ತದ ಚೆಕ್ ಗಳನ್ನು ವಿತರಿಸಲಾಯಿತು. ಪ್ರವೀಣ್‌ಕುಮಾರ್ ಅವರ ಪುತ್ರ ನಿಗೆ 1.53 ಲಕ್ಷ, ಬಾವಾಜಿಗೆ 43 ಸಾವಿರ ಹಾಗೂ ಲಿಂಗಸ ಗೂರಿನ ಗೃಹರಕ್ಷಕ ದಳದ ಸಿಬ್ಬಂದಿ ತಿಮ್ಮನಗೌಡ ಅವರಿಗೆ 14 ಸಾವಿರ ಮೊತ್ತದ ಚೆಕ್ ನೀಡಲಾಯಿತು.

ಗಣೇಶೋತ್ಸವದಲ್ಲಿ ಜಾಗೃತಿ ಮೂಡಿಸುವ ವಿಶಿಷ್ಟ ಅಲಂಕಾರ

ಸಿರುಗುಪ್ಪ,ಸೆ.17– ಗಣೇಶ ಚತುರ್ಥಿ ಸಂಭ್ರಮದ ನಡುವೆ, ಡಿಜಿಟಲ್ ಯುಗದಲ್ಲಿ ಮಕ್ಕಳ ಭವಿಷ್ಯದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ನಗರದ ಕೊಟ್ರೇಶ್ವರ ದೇವಸ್ಥಾನದ ಗಣೇಶೋತ್ಸವದಲ್ಲಿ ಜಾಗೃತಿ ಫಲಕಗಳನ್ನು ವಿಶೇಷ ಹಾಗೂ ಅರ್ಥಪೂರ್ಣ ಆಚರಣೆ ನಡೆಸಿದ್ದಾರೆ.

ಚಿಕ್ಕ ಮಕ್ಕಳಿಗೆ ಮೊಬೈಲ್ ನೀಡಬೇಡಿ ಅವರ ಬಾಲ್ಯ ಮೊಬೈಲ್ ಪರದೆಯಲ್ಲಲ್ಲ ನಮ್ಮ ಪ್ರೀತಿಯಲ್ಲಿ ಅರಳಲಿ ಗಾಲಿ ಓಡಿಸುವ, ಕಬ್ಬಡ್ಡಿ ಆಟ ಆಡುವ, ಸಂಸ್ಕೃತಿಯ ಪಾಲನೆಯ ಕುರಿತ ಪ್ರಮುಖ ಸಾಮಾಜಿಕ ಜಾಗೃತಿ ಸಂದೇಶವನ್ನು ಫಲಕದಲ್ಲಿ ಬಿಂಬಿಸಲಾಗಿದೆ. ಬಾಲ ಗಣೇಶನ ಮೂರ್ತಿಯ ಸುತ್ತಲೂ ಸಾಕುಪ್ರಾಣಿಗಳು, ಗೊಂಬೆಗಳು, ಆಟಿಕೆಗಳು ಹಾಗೂ ಪುಸ್ತಕಗಳನ್ನಿಟ್ಟು ಅಲಂಕರಿಸಲಾಗಿದ್ದು, ಮಕ್ಕಳು ತಂತ್ರಜ್ಞಾನಕ್ಕಿಂತ ಹೆಚ್ಚಾಗಿ ಪ್ರಕೃತಿ, ಆಟ ಹಾಗೂ ಸಾಹಿತ್ಯದತ್ತ ಆಕರ್ಷಿತವಾಗಿವೆ.



ಸಾಂಪ್ರದಾಯಿಕ ದೀಪಾಲಂಕಾರ, ಕಳಶ ಹಾಗೂ ಪೂಜಾ ವಿಧಿವಿಧಾನಗಳೊಂದಿಗೆ ಆಧುನಿಕ ಸಮಸ್ಯೆಯೊಂದಕ್ಕೆ ಕನ್ನಡಿ ಹಿಡಿಯುವ ಪ್ರಯತ್ನವನ್ನು ಸಂಘಟಕರು ಮಾಡಿದ್ದಾರೆ. ಮೊಬೈಲ್ ದಾಸ್ಯಕ್ಕೆ ಒಳಗಾಗುತ್ತಿರುವ ಇಂದಿನ ಪೀಳಿಗೆಗೆ, ಮಕ್ಕಳ ಬಾಲ್ಯವನ್ನು ತಂತ್ರಜ್ಞಾನದ ಕೈಗೆ ಒಪ್ಪಿಸದೆ ಸಂಸ್ಕೃತಿ ಮತ್ತು ಪ್ರೀತಿಯಿಂದ ಬೆಳೆಸಬೇಕೆಂಬ ಈ ಗಣೇಶೋತ್ಸವ ಸಮಿತಿಯ ಪ್ರಯತ್ನಕ್ಕೆ ಸಾರ್ವಜನಿಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತಪಡಿಸಿದರು.

ಓಂ ಸಾಯಿ ಧ್ಯಾನ ಮಂದಿರದಲ್ಲಿ 'ಸಿಟಿ ಲೈಟ್ಸ್' ಚಿತ್ರದ ಪೋಸ್ಟರ್ ಬಿಡುಗಡೆ



ರಾಯಚೂರು,ಸೆ.17– ಇದೇ ಸೆಪ್ಟೆಂಬರ್ 18 ರಂದು ಬಿಡುಗಡೆಯಾಗಲಿರುವ ನಟ ಹಾಗೂ ನಿರ್ದೇಶಕ ದುನಿಯಾ ವಿಜಯ್ ಅವರ 'ಸಿಟಿ ಲೈಟ್ಸ್' ಚಿತ್ರದ ಪೋಸ್ಟರ್ ಅನ್ನು ಇಂದು ರಾಯಚೂರಿನ ಓಂ ಸಾಯಿ ಧ್ಯಾನ ಮಂದಿರದಲ್ಲಿ ಬಿಡುಗಡೆ ಮಾಡಲಾಯಿತು.

ಸದ್ಗುರು ಶ್ರೀ ಸಾಯಿನಾಥನ ಸನ್ನಿಧಿಯಲ್ಲಿ ಚಿತ್ರದ ಯಶಸ್ಸಿಗಾಗಿ ವಿಶೇಷ ಪೂಜೆ ಹಾಗೂ ಪ್ರಾರ್ಥನೆ ಸಲ್ಲಿಸಿದ ನಂತರ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಈ ಚಿತ್ರದಲ್ಲಿ ಕನ್ನಡದ ಹಿರಿಯ ನಟ ರಾಘವೇಂದ್ರ ರಾಜ್‌ಕುಮಾರ್ ಅವರ ಪುತ್ರ ಹಾಗೂ ಡಾ. ರಾಜ್‌ಕುಮಾರ್ ಕುಟುಂಬದ ಕುಡಿ ಯುವ ರಾಜ್‌ಕುಮಾರ್ ಅವರು ನಾಯಕ ನಟರಾಗಿ ಅಭಿನಯಿಸಿದ್ದಾರೆ. ಈ ಚಿತ್ರದ ಮೂಲಕ ಯುವ ರಾಜ್‌ಕುಮಾರ್ ಅವರಿಗೆ ಉತ್ತಮ ಯಶಸ್ಸು, ಜನಮನ್ನಣೆ ಮತ್ತು ಉಜ್ವಲ ಭವಿಷ್ಯ ದೊರೆಯಲಿ ಎಂದು ಸದ್ಗುರು ಸಾಯಿನಾಥನಲ್ಲಿ ವಿಶೇಷವಾಗಿ ಪ್ರಾರ್ಥಿಸಲಾಯಿತು.

ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಶಾಂತುಗೌಡ ಗುತ್ತೇದಾರ್, ಶ್ರೀ ವೀರೇಶ್, ಶ್ರೀ ಸುನೀಲ್ ದದ್ದಲ್, ಶ್ರೀ ಸುರೇಶ್ ಪಾಟೀಲ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಾಯಿ ಕಿರಣ್ ಗುರುಜಿ, "ದುನಿಯಾ ವಿಜಯ್ ಅವರು ತಮ್ಮ ಆತ್ಮೀಯರಾಗಿದ್ದು, ಮುಂದಿನ ದಿನಗಳಲ್ಲಿ ರಾಯಚೂರಿನ ಓಂ ಸಾಯಿ ಧ್ಯಾನ ಮಂದಿರಕ್ಕೆ ಭೇಟಿ ನೀಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ" ಎಂದು ತಿಳಿಸಿದರು. "ಸದ್ಗುರು ಶ್ರೀ ಸಾಯಿನಾಥನ ಕೃಪೆಯಿಂದ 'ಸಿಟಿ ಲೈಟ್ಸ್' ಚಿತ್ರವು ಯಶಸ್ವಿಯಾಗಲಿ. ನಟ ದುನಿಯಾ ವಿಜಯ್, ನಾಯಕ ನಟ ಯುವ ರಾಜ್‌ಕುಮಾರ್ ಸೇರಿದಂತೆ ಇಡೀ ಚಿತ್ರತಂಡಕ್ಕೆ ಉತ್ತಮ ಯಶಸ್ಸು, ಜನಮನ್ನಣೆ ಹಾಗೂ ಶುಭಫಲ ದೊರೆಯಲಿ ಎಂದು ಸಾಯಿನಾಥನಲ್ಲಿ ಪ್ರಾರ್ಥಿಸುತ್ತೇವೆ" ಎಂದು ಸಾಯಿ ಕಿರಣ್ ಗುರುಜಿ ಹಾರೈಸಿದರು.

ವಿಶ್ವಕರ್ಮ ಸಮುದಾಯವು ತನ್ನ ಕಲೆ. ಕೌಶಲ್ಯ. ಶ್ರಮದ ಮೂಲಕ ಸಾಮಾಜಕ್ಕೆ ಅಮೂಲ್ಯ ಕೊಡುಗೆ ನೀಡಿದೆ : ಬಸನಗೌಡ ಬಾದರ್ಲಿ



ಸಿಂಧನೂರು,ಸೆ.17– ಇಂದು ಸಿಂಧನೂರು ತಹಶೀಲ್ದಾರ್ ಕಾರ್ಯಾಲಯದಲ್ಲಿ ಇಂದು ತಾಲೂಕ ಆಡಳಿತದ ವತಿಯಿಂದ ಆಯೋಜಿಸಲಾಗಿದ್ದ. ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ. ವಿಧಾನ ಪರಿಷತ್ ಶಾಸಕರಾದ. ಶ್ರೀ ಬಸನಗೌಡ ಬಾದರ್ಲಿ ಅವರು. ಭಾಗವಹಿಸಿ. ಭಗವಾನ್ ವಿಶ್ವಕರ್ಮರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ. ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು. ವಿಶ್ವಕರ್ಮ ಸಮುದಾಯವು ತನ್ನ ಕಲೆ. ಕೌಶಲ್ಯ ಮತ್ತು ಶ್ರಮ ಹಾಗೂ ಪರಂಪರೆಯ ಮೂಲಕ ಸಮಾಜದ ನಿರ್ಮಾಣದಲ್ಲಿ ನೀಡುತ್ತಿರುವ ಅಮೂಲ್ಯ ಕೊಡುಗೆಯನ್ನು ಸ್ಮರಿಸಿದರು. ಯುವ ಪೀಳಿಗೆ ನಮ್ಮ ಸಂಪ್ರದಾಯಿಕ ಕಲೆ ಮತ್ತು ಕೌಶಲ್ಯಗಳನ್ನು ಉಳಿಸಿಕೊಂಡು. ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಅಗತ್ಯದ ಕುರಿತು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ ಸೇರಿದಂತೆ. ಅಧಿಕಾರಿಗಳು ವಿಶ್ವಕರ್ಮ ಸಮಾಜದ ಮುಖಂಡರು. ವಿವಿಧ ಪಕ್ಷದ ರಾಜಕೀಯ ಮುಖಂಡರು. ಪದಾಧಿಕಾರಿಗಳು ಹಾಗೂ ಸಮಾಜದ ಬಂಧುಗಳು ಉಪಸ್ಥಿತರಿದ್ದರು.

ಕ.ಕ.ಭಾಗದ ಅಭಿವೃದ್ಧಿಗೆ ಅನುದಾನ,ಯೋಜನೆಗಳ ಅನುಷ್ಠಾನಕ್ಕೂ ಒತ್ತು

ಯಲ್ಲಿ ಯೋಜನೆಗಳನ್ನು ಪೂಣ ್ಗಗೊಳಿಸಿ ಅದರ ಪ್ರಯೋಜನ ವನ್ನು ಜನರಿಗೆ ತಲುಪಿಸುವುದೇ ಸರ್ಕಾರದ ಆದ್ಯತೆ ಎಂದು ಹೇಳಿದರು. "ಕಲ್ಯಾಣ ಕರ್ನಾಟ ಕದ ಅಭಿವೃದ್ಧಿಗೆ ಹಣಕಾಸಿನ ಕೊರತೆ ಇರಬಾರದು ಎಂಬು ದು ಒಂದು ಭಾಗ; ಮಂಜೂ ರಾದ ಅನುದಾನವನ್ನು ಸಮ ರ್ಪಕವಾಗಿ ಬಳಸಿಕೊಂಡು ಯೋಜನೆಗಳನ್ನು ಸಮಯಕ್ಕೆ ಪೂರ್ಣ ಗೊಳಿಸುವುದು ಇನ್ನಷ್ಟು ಮುಖ್ಯ. ಶಿಕ್ಷಣ, ಆರೋಗ್ಯ, ರಸ್ತೆ, ಕೌಶಲ್ಯ, ನೀರಾವರಿ ಸೇರಿದಂತೆ ಪ್ರತಿಯೊ ಂದು ಕ್ಷೇತ್ರದಲ್ಲೂ ಜನರಿಗೆ ಕಾಣುವ ಬದಲಾವಣೆ ತರಬೇಕು," ಎಂದು ಡಾ. ಅಜ ಯ್ ಧರ್ಮಸಿಂಗ್ ಹೇಳಿದರು.

ಶಿಕ್ಷಣಕ್ಕೆ ಆದ್ಯತೆ : 'ಅಕ್ಷರ ಆವಿಷ್ಕಾರ', 'ಕಲಿಕಾಸರೆ', ಕರ್ನಾ ಟಕ ಪಬ್ಲಿಕ್ ಶಾಲೆಗಳ ಅಭಿವೃದ್ಧಿ, ಶಾಲಾ–ಕಾಲೇಜು ಮೂಲ ಸೌಕರ್ಯ, ಹೆಚ್ಚುವರಿ ತರಗತಿ ಕೊಠಡಿಗಳು, ಸ್ಮಾರ್ಟ್ ಕ್ಲಾಸ್ ಗಳು, ಗ್ರಂಥಾಲಯ ಹಾಗೂ ಕೌಶಲ್ಯಾಧಾರಿತ ಶಿಕ್ಷಣ ಕಾಯ ್ಗಕ್ರಮಗಳ ಮೂಲಕ ಪ್ರದೇಶದ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಒತ್ತು ನೀಡಲಾಗಿದೆ ಎಂದರು.

'ಅಕ್ಷರ ಆವಿಷ್ಕಾರ'ಕ್ಕೆ 2,20 2.81 ಕೋಟಿ ಹಾಗೂ ಶಾಲೆ–ಕಾಲೇಜು ಮೂಲಸೌಕರ್ಯ ಅಭಿವೃದ್ಧಿಗೆ 2,170.46 ಕೋಟಿ ಮೊತ್ತದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಹೇಳಿದರು.

ರಸ್ತೆ, ಆರೋಗ್ಯ ಮತ್ತು ನೀರಾವರಿಗೂ ಒತ್ತು: ಗ್ರಾಮೀಣ ಸಂಪರ್ಕ ಸುಧಾರಣೆಗೆ 1,000 ಕೋಟಿ ಮೊತ್ತದ 'ಕಲ್ಯಾಣ ಪಥ' ಯೋಜನೆ, ಆರೋಗ್ಯ ಮೂಲ ಸೌಕರ್ಯ ವಿಸ್ತರಣೆಗೆ 'ಆರೋಗ್ಯ ಆವಿಷ್ಕಾರ', 32 ಸುಸಜ್ಜಿತ ಆಂಬುಲೆನ್ಸ್‌ಗಳ ವ್ಯವಸ್ಥೆ ಹಾಗೂ ವಿವಿಧ ಆಸ್ಪತ್ರೆಗಳ ಉನ್ನತೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊ ಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.

ಕೆರೆ ಅಭಿವೃದ್ಧಿ ಮತ್ತು ಸಣ್ಣ ನೀರಾವರಿ ಕಾಮಗಾರಿಗಳಿಗೆ ಸುಮಾರು 425 ಕೋಟಿ ಅನುದಾನ ನಿಗದಿಪಡಿಸಲಾಗಿದ್ದು, ಕೃಷಿ ಮತ್ತು ಅಂತರ್ಜಲ ಮರುಪೂರಣಕ್ಕೆ ಪೂರಕವಾದ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ ಎಂದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ 34 ಹೊಸ ವಸತಿನಿಲಯಗಳು, ಹೊಸ ತಾಲೂಕುಗಳಲ್ಲಿ ಪ್ರಜಾಸೌಧಗಳು ಹಾಗೂ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಮೂಲಸೌಕರ್ಯ ಬಲವರ್ಧ ನೆಗೂ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಮುಂದಿನ ಹಂತದಲ್ಲಿ ಫಲಿತಾಂಶ ಆಧಾರಿತ ಅಭಿವೃದ್ಧಿ : ಕಲ್ಯಾಣ ಕರ್ನಾಟಕದ ಮುಂ ದಿನ ಅಭಿವೃದ್ಧಿ ಯೋಜನೆಗಳು ದತ್ತಾಂಶ ಮತ್ತು ಫಲಿತಾಂಶ ಆಧಾರಿತವಾಗಿರಬೇಕು ಎಂದು ಸಚಿವರು ಒತ್ತಿ ಹೇಳಿದರು.

ಪ್ರಾದೇಶಿಕ ಅಸಮತೋ ಲನದ ಮರು ಅಧ್ಯಯನದ ಆಧಾರದಲ್ಲಿ 2026–31ರ ದೀರ್ಘಾವಧಿ ಅಭಿವೃದ್ಧಿ ಯೋಜನೆ ರೂಪಿಸಲಾಗುತ್ತಿದ್ದು, ಯೋಜನೆಗಳ ಪರಿಣಾಮವನ್ನು ಅಳೆಯಲು ಪ್ರತ್ಯೇಕ Planning, Policy and Data Analytics Wing (PPD AW) ಸ್ಥಾಪಿಸುವ ಪ್ರಕ್ರಿಯೆಯೂ ನಡೆಯುತ್ತಿದೆ ಎಂದರು.

"ಕಲ್ಯಾಣ ಕರ್ನಾಟಕಕ್ಕೆ ದೊರೆತ ವಿಶೇಷ ಸ್ಥಾನಮಾನದ ಪ್ರಯೋಜನ ಪ್ರತಿಯೊಂದು ಕುಟುಂಬಕ್ಕೂ, ಪ್ರತಿಯೊಂದು ವಿದ್ಯಾರ್ಥಿಗೂ, ರೈತನಿಗೂ ಮತ್ತು ಯುವಕರಿಗೂ ತಲು ಪಬೇಕು. ಮುಂದಿನ ಹಂತದಲ್ಲಿ ಅನುದಾನದ ಜೊತೆಗೆ ಅದರ ಫಲಿತಾಂಶದ ಲೆಕ್ಕವೂ ಮುಖ್ಯ ವಾಗಲಿದೆ," ಎಂದು ಡಾ. ಅಜ ಯ್ ಧರ್ಮಸಿಂಗ್ ಹೇಳಿದರು.

ಹಳೇ ಕಿರಾಣಿ ಬಜಾರ್ ಗಣೇಶೋತ್ಸವದಲ್ಲಿ ಮಹಿಳೆಯರ ಸೇವೆ ವಿಶೇಷ 1500ರಿಂದ 2000 ಹೋಳಿಗೆ, ಕಡುಬು ತಯಾರಿ- ಅನ್ನದಾಸೋಹ

ತಯಾರಿಸುವ ಮೂಲಕ ಧಾರ್ಮಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಭಕ್ತರಿಗೆ ಪ್ರಸಾದ ವಿತರಿಸುವ ಉದ್ದೇಶದಿಂದ ಮಹಿಳೆಯರು ಶ್ರಮಿಸುತ್ತಿರುವುದು ಉತ್ಸವದ ವಿಶೇಷತೆಯಾಗಿದೆ.

ಈ ಸಂದರ್ಭದಲ್ಲಿ ವಿರೂಪಾಕ್ಷಪ್ಪ ಹೂಗಾರ, ಹನುಮಂತ ಹುಡೇದ, ಪರಶುರಾಮ ಹುಡೇದ, ಅಮರೇಶ್ ಕಳ್ಳಿಮನಿ, ಪರಶುರಾಮ ಕಟ್ಟಿಮನಿ, ಶೇಖಮ್ಮ ಹೂಗಾರ, ಗುರು ಪತ್ತಾರ, ಶ್ರೀಲೈಸ್ ಪತ್ತಾರ, ಕುಮಾರ ಪತ್ತಾರ, ಸಂತೋಷ ಕಳ್ಳಿಮನಿ ಸೇರಿದಂತೆ ಗಜಾನನ ಯುವಕ ಮಂಡಳಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಹಿಳೆಯರ ಶ್ರಮ, ಭಕ್ತಿ ಮತ್ತು ಸೇವಾಭಾವದಿಂದ ಹಳೇ ಕಿರಾಣಿ ಬಜಾರ್ ಗಣೇಶೋತ್ಸವಕ್ಕೆ ವಿಶೇಷ ಮೆರುಗು ಬಂದಿದೆ.

ಕರಾಟೆ ತರಬೇತಿಯಿಂದ ಮಕ್ಕಳಲ್ಲಿ ಆತ್ಮ ವಿಶ್ವಾಸ ಬೆಳೆಯುತ್ತದೆ : ಮೀನಾಕ್ಷಿ

ಕೊಪ್ಪಳ,ಸೆ.17– ಇಂದಿನ ದಿನಗಳಲ್ಲಿ ಮಕ್ಕಳಿಗೆ ಅದರಲ್ಲಿ ವಿಶೇಷವಾಗಿ ಬಾಲಕಿಯರಿಗೆ ಶಿಕ್ಷಣದ ಜೊತೆಗೆ ದೈಹಿಕ ಸಾಮರ್ಥ್ಯ ಮತ್ತು ಆತ್ಮ ರಕ್ಷಣೆ ಹಾಗೂ ಶಿಸ್ತು ಬೆಳೆಸುವ ನಿಟ್ಟಿ ನಲ್ಲಿ ಕರಾಟೆ ತರಬೇತಿ ಅತ್ಯಂತ ಮಹತ್ವ ಪಡೆದುಕೊಂಡಿದೆ ಇದ ರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷ ರಾದ ಮೀನಾಕ್ಷಿ ಬಣ್ಣದ ಭಾವಿ ಹೇಳಿದರು,

ಅವರು ನಗರದ ಲೈನ್ಸ್ ಶಾಲೆಯಲ್ಲಿ ಇನ್ನರ್ ವೀಲ್ ಕ್ಲಬ್ (ಜಿಲ್ಲೆ 316) ಹಾಗೂ ಲೈನ್ಸ್ ಕ್ಲಬ್ ಇವುಗಳ ಸಹಯೋಗದಲ್ಲಿ ಶಾಲಾ ಬಾಲಕಿಯರಿಗಾಗಿ ಏರ್ಪಡಿಸಿದ ಸಬಲೀಕರಣ ಹಾಗೂ ಸ್ವಯಂ ರಕ್ಷಣಾ ಕರಾಟೆ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕರಾಟೆ ತರಬೇತಿ ಗೆ ಚಾಲನೆ ನೀಡಿ ಮಾತನಾ ಡಿದರು,

ಮುಂದುವರೆದು ಮಾತನಾ ಡಿ ಕರಾಟೆ ಕೇವಲ ಆತ್ಮ ರಕ್ಷಣೆಗೆ ಅಷ್ಟೇ ಅಲ್ಲ ದೈಹಿಕ ಮತ್ತು ಮಾನಸಿಕ ಸದೃಢತೆಗೆ ಕರಾಟೆ ಸಹಕಾರಿಯಾಗುವ ಕ್ರೀಡೆ ಯಾಗಿದೆ, ಇದರಿಂದ ಮಕ್ಕಳಲ್ಲಿ ಶಿಸ್ತು ಏಕಾಗ್ರತೆ ಸಮಯ ಪಾಲನೆ ಹಾಗು ಆತ್ಮವಿಶ್ವಾಸ ಹೆಚ್ಚುತ್ತದೆ ನಿಯಮಿತವಾಗಿ ತರಬೇತಿ ಪಡೆಯುವುದರಿಂದ ದೇಹದ ಚುರುಕುತನ ಸಮ ತೋಲನ ಮತ್ತು ದೈಹಿಕ ಸಾಮ ರ್ಥ್ಯವು ಕೂಡ ವೃದ್ಧಿಯಾ ಗುತ್ತದೆ, ಶಾಲಾ ಕಾಲೇಜುಗಳಲ್ಲಿ ಕರಾಟೆ ತರಬೇತಿಗೆ ಹೆಚ್ಚಿನ ಪ್ರೋ ತ್ಸಾಹ ನೀಡಬೇಕು ,ವಿಶೇಷವಾಗಿ ಬಾಲಕಿಯರಿಗೆ ಆತ್ಮ ರಕ್ಷಣಾ ಕೌಶಲ್ಯಗಳನ್ನು ಕಲಿಸುವ ಮೂಲಕ ಅವರು ಆತ್ಮ ವಿಶ್ವಾಸ ದಿಂದ ಜೀವನ ನಡೆಸಲು ಸಾಧ್ಯ ವಾಗುತ್ತದೆ ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷ ರಾದ ಮೀನಾಕ್ಷಿ ಬಣ್ಣದ ಭಾವಿ ಹೇಳಿದರು,

ಈ ಸಂದರ್ಭದಲ್ಲಿ ಬಾಲಕಿ ಯರಿಗೆ ಕರಾಟೆ ತರಬೇತಿ ನೀಡಿದ ಕರಾಟೆ ಮಾಸ್ಟರ್ ಮೌನೇಶ್ ಬಡಿಗೇರಗೆ ಕ್ಲಬ್ ಪರವಾಗಿ ಸನ್ಮಾನಿಸಲಾಯಿತು ಕಾರ್ಯಕ್ರಮದಲ್ಲಿ ಕ್ಲಬ್ಬಿನ ಕಾರ್ಯದರ್ಶಿ ಶ್ರೀದೇವಿ ಪಾಟೀಲ್ ಐಎಎಸ್ ಲತಾ ಪಟ್ಟಣಶೆಟ್ಟಿ ಖಜಾಂಚಿ ಶಿಲ್ಪ ರಾಜು ಶಶಿಮಠ, ಸೇರಿದಂತೆ ಕ್ಲಬ್ಬಿನ ಪದಾಧಿಕಾರಿಗಳು ಸದಸ್ಯರು ಮತ್ತು ಕರಾಟೆ ತರಬೇತಿ ದಾರರು ಶಾಲೆಯ ಬಾಲಕಿಯರು ಪಾಲ್ಗೊಂಡಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಖರೀದಿ ಮೇಲೆ ತೆರಿಗೆ, ಖರೀದಿ ಹಣಕ್ಕೆ ಶುಲ್ಕಇದು ಮೋದಿ ಡಿಜಿಟಲ್ ದರೋಡೆ!

ನಾವು ಒಂದು ವಸ್ತುವನ್ನು ಯುಪಿಐ ಮೂಲಕ ಖರೀದಿಸಿದರೆ, ಅದಕ್ಕೆ ತೆರಿಗೆ ತೆರಬೇಕು. ಸಾಲದು ಎಂದು ಈಗ ಶುಲ್ಕವನ್ನೂ ಭರಿಸಬೇಕು. ಇದು ಪ್ರಧಾನಿ ಮೋದಿಯವರ ಡಿಜಿಟಲ್ ದರೋಡೆಯಲ್ಲವೇ? ಇದನ್ನು ಪ್ರಶ್ನಿಸುವವರು ದೇಶದ್ರೋಹಿಗಳೇ?

ವಿಶ್ವದಲ್ಲೇ ಅತಿ ದೊಡ್ಡ ಡಿಜಿಟಲ್ ಪಾವತಿ ವ್ಯವಸ್ಥೆಯಾಗಿರುವ ಯುನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್(ಯುಪಿಐ)ನ ಸೈಬರ್ ಭದ್ರತೆ, ತಂತ್ರಜ್ಞಾನ ನವೀಕರಣ ಮತ್ತು ಮೂಲಸೌಕರ್ಯ ನಿರ್ವಹಣೆಗಾಗಿ ವಾರ್ಷಿಕ ಸುಮಾರು 20,700 ಕೋಟಿ ರೂ. ವೆಚ್ಚವಾಗುತ್ತಿದೆ. ಇದನ್ನು ಭರಿಸಲು ವ್ಯಾಪಾರಿ ರಿಯಾಯಿತಿ ದರ(ಮರ್ಚೆಂಟ್ಸ್ ಡಿಸ್ಕೌಂಟ್ ರೇಟ್-ಎಂಡಿಆರ್) ಶುಲ್ಕ ವಿಧಿಸಲು ನಿರ್ಧರಿಸಲಾಗಿದೆ. ಇದು ಅಕ್ಟೋಬರ್ 15ರಿಂದ ಜಾರಿಗೆ ಬರಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಅಂದರೆ, ಅಕ್ಟೋಬರ್ 15ರಿಂದ ಡಿಜಿಟಲ್ ಪಾವತಿ ಉಚಿತವಲ್ಲ. 2 ಸಾವಿರ ರೂ.ಗಿಂತ ಹೆಚ್ಚಿನ ವ್ಯಾಪಾರ-ವಹಿವಾಟುಗಳ ಮೇಲೆ ಶೇ. 0.4ರಷ್ಟು ಎಂಡಿಆರ್ ಶುಲ್ಕ ವಿಧಿಸಲಾಗುತ್ತದೆ. ಈ ಶುಲ್ಕವನ್ನು ಗ್ರಾಹಕರಲ್ಲ, ವರ್ತಕರು ಭರಿಸಬೇಕಾಗುತ್ತದೆ. ಗ್ರಾಹಕರಿಗೆ ಈ ಶುಲ್ಕವನ್ನು ವಿಧಿಸದಂತೆ ರಾಷ್ಟ್ರೀಯ ಪಾವತಿ ನಿಗಮ(ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ- ಎನ್‌ಪಿಸಿಐ) ಬ್ಯಾಂಕುಗಳಿಗೆ ಕಟ್ಟುನಿಟ್ಟಾಗಿ ಸೂಚನೆ ನೀಡಿದೆ. ಆದರೆ ಅವರು ಪಾಲಿಸುತ್ತಾರೆಯೇ?

ಕಾಲಕ್ಕೆ ತಕ್ಕಂತೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು, ಡಿಜಿಟಲ್ ವ್ಯವಸ್ಥೆ ವಿಸ್ತರಣೆಯಾಗಬೇಕು, ಅದರ ನಿರ್ವಹಣೆಗೆ ವೆಚ್ಚವಾಗುತ್ತದೆ, ಗ್ರಾಹಕರ ಮೇಲೆ ಶುಲ್ಕವಿಲ್ಲ, ವರ್ತಕರು ಭರಿಸುತ್ತಾರೆ ಎನ್ನುವ ಕೇಂದ್ರ ಸರ್ಕಾರದ ಸಮರ್ಥನೆ, ಸದ್ಯಕ್ಕೆ ಸರಿ ಎನಿಸಬಹುದು. ಆದರೆ ಆ ಡಿಜಿಟಲ್ ಅಂಕಿ-ಸಂಖ್ಯೆಗಳ ಆಳಕ್ಕೆ ಇಳಿದು ನೋಡಿದರೆ, ಮೋದಿಯವರ ಸರ್ಕಾರದ ಮರೆಮೋಸಗಳು ಕಾಣುತ್ತವೆ.

ಈಗ ಹೊಸದಾಗಿ ಹೇರಲ್ಪಡುವ ಎಂಡಿಆರ್ ಶುಲ್ಕ ಯಾರ ಖಾತೆಗೆ ಜಮೆಯಾಗಲಿದೆ ಎಂಬುದಕ್ಕೆ ಉತ್ತರವಾಗಿ ರಾಷ್ಟ್ರೀಯ ಪಾವತಿ ನಿಗಮವು, ಶೇ. 40ರಷ್ಟು ಗ್ರಾಹಕರ ಬ್ಯಾಂಕಿಗೆ, ಶೇ. 30ರಷ್ಟು ವ್ಯಾಪಾರಿ ಬ್ಯಾಂಕಿಗೆ, ಶೇ. 20ರಷ್ಟು ಫೋನ್ ಪೇ, ಗೂಗಲ್ ಪೇಗಳಂತಹ ಅಪ್ಲಿಕೇಷನ್‌ಗಳಿಗೆ, ಶೇ. 10ರಷ್ಟು ಪ್ರಾಯೋಜಕ ಬ್ಯಾಂಕ್‌ಗಳಿಗೆ ಎಂದಿದೆ. ಉದಾಹರಣೆಗೆ ನೀವು 10 ಸಾವಿರ ವ್ಯಾಪಾರ ಮಾಡಿದರೆ, 40 ರೂ. ಶುಲ್ಕ ಭರಿಸಬೇಕು. ಇದರಲ್ಲಿ ನಾವು ವ್ಯವಹರಿಸುವ ಬ್ಯಾಂಕಿಗೆ 16, ವರ್ತಕರ ಬ್ಯಾಂಕಿಗೆ 12, ಅಪ್ಲಿಕೇಷನ್‌ಗಳಿಗೆ 8 ಮತ್ತು ಪ್ರಾಯೋಜಕ ಬ್ಯಾಂಕ್‌ಗಳಿಗೆ 4 ರೂ. ಸಂದಾಯವಾಗುತ್ತದೆ.

ಸದ್ಯಕ್ಕೆ ದೇಶದಲ್ಲಿರುವ ಯುಪಿಐ ಬಳಕೆದಾರರ ಸಂಖ್ಯೆ 55.5 ಕೋಟಿ. 2025-26ರಲ್ಲಿ ಯುಪಿಐ ಮೂಲಕ ನಡೆದ ಒಟ್ಟು ವಹಿವಾಟು 198 ಲಕ್ಷ ಕೋಟಿ. ಇದರಲ್ಲಿ 2 ಸಾವಿರಕ್ಕಿಂತ ಮೇಲ್ಪಟ್ಟ ಯುಪಿಐ ಪಾವತಿ ಪಾಲು 131 ಲಕ್ಷ ಕೋಟಿ. 2 ಸಾವಿರಕ್ಕಿಂತ ಕಡಿಮೆ ಮೊತ್ತದ ಪಾವತಿ ಪಾಲು 67 ಲಕ್ಷ ಕೋಟಿ. 2 ಸಾವಿರಕ್ಕಿಂತ ಮೇಲ್ಪಟ್ಟ ಯುಪಿಐ ಪಾವತಿ ಪಾಲಿನ 131 ಲಕ್ಷ ಕೋಟಿಗೆ ಈಗಿನ ಶೇ. 0.04ರಷ್ಟು ಶುಲ್ಕ ಲೆಕ್ಕ ಹಾಕಿದರೆ, 84 ಸಾವಿರ ಕೋಟಿ ಆಗುತ್ತದೆ. ಇದರಲ್ಲಿ ಬ್ಯಾಂಕ್‌ಗಳಿಗೆ ಹೋಗುವ ಶುಲ್ಕ ಶೇ. 80, ಅಪ್ಲಿಕೇಷನ್‌ಗಳಿಗೆ ಹೋಗುವ ಶುಲ್ಕ ಶೇ. 20ರಷ್ಟು.

ಭಾರತದಲ್ಲಿ ಶೇ. 80ರಷ್ಟು ಯುಪಿಐ ಹಿಡಿತ ಹೊಂದಿರುವ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳೆಂದರೆ, ಅಮೆರಿಕದ ವಾಲ್‌ಮಾರ್ಟ್ ಕಂಪನಿಯ ಫೋನ್ ಪೇ ಮತ್ತು ಗೂಗಲ್ ಕಂಪನಿಯ ಗೂಗಲ್ ಪೇ. ಈ ಕಂಪನಿಗಳಿಗೆ ಶೇ. 20ರಷ್ಟು ಶುಲ್ಕವೆಂದರೆ ಸುಮಾರು 4,200 ಕೋಟಿ ಅನಾಯಾಸವಾಗಿ ಹರಿದುಹೋಗುತ್ತದೆ. ಈ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು, ಅಮೆರಿಕ ಕಂಪನಿಗಳನ್ನು ಓಲೈಸಲು ಮತ್ತು ಅಧ್ಯಕ್ಷ ಟ್ರಂಪ್ ಅವರನ್ನು ಸಮಾಧಾನಪಡಿಸಲು ಭಾರತದ ಡಿಜಿಟಲ್ ಪಾವತಿಗಳ ಮೇಲೆ ಶುಲ್ಕ ವಿಧಿಸಲಾಗುತ್ತಿದೆ ಎಂದಿರುವುದು- ಟ್ರಂಪ್ ಮುಂದೆ ಮೋದಿ ಮಂಡಿಯೂರಿದ್ದಾರೆ ಎನ್ನುವುದನ್ನು ಸಾಬೀತುಪಡಿಸುತ್ತಿದೆ.

ಆದರೆ, 2020ರಲ್ಲಿ ಡಿಜಿಟಲ್ ವ್ಯವಸ್ಥೆಯನ್ನು ಜಾರಿಗೆ ತರುವಾಗ ಪ್ರಧಾನಿ ಮೋದಿಯವರು, ನಗದು ಅವಲಂಬನೆ ಕಡಿಮೆ ಮಾಡುವುದು, ಸುಲಭಸುರಕ್ಷಿತ ಪಾವತಿ, ಪಾರದರ್ಶಕತೆ ಮತ್ತು ಸಾಮಾನ್ಯ ಜನರಿಗೆ ಬ್ಯಾಂಕಿಂಗ್ ಸೇವೆ ತಲುಪಿಸುವುದು ಎಂದಿದ್ದರು. ಸಾಲದು ಎಂದು ಬಡವರು ಮತ್ತು ಅಂಚಿನಲ್ಲಿರುವವರಿಗೆ ಹಣಕಾಸು ಸೇವೆಗಳು ಹಾಗೂ ನೇರ ಹಣ ವರ್ಗಾವಣೆ ಸಾಧ್ಯವಾಗಲಿದೆ ಎಂದು ಬಡವರನ್ನು ಬರಸೆಳೆದು ಪ್ರಚಾರ ಪಡೆದಿದ್ದರು.

ದೇಶದ ಜನ ಡಿಜಿಟಟ್ ಪಾವತಿಗೆ ಒಗ್ಗಿಕೊಳ್ಳುವುದು ತ್ರಾಸವಾಯಿತು. ಅದರಲ್ಲೂ ಅನಕ್ಷರಸ್ಥರಿಗೆ, ಗ್ರಾಮೀಣರಿಗೆ, ಮೊಬೈಲ್ ಇಲ್ಲದವರಿಗೆ, ಬಡವರಿಗೆ ಕಷ್ಟವಾಯಿತು. ಆದರೂ ದೇಶಕ್ಕಾಗಿ ಎಂದು ಸಹಿಸಿಕೊಂಡರು.

ದೇಶದ ಜನರ ಸಹನೆಯನ್ನು ದುರುಪಯೋಗಪಡಿಸಿಕೊಂಡ ಮೋದಿಯವರು, ಭಾರತ ನಗದುರಹಿತ ದೇಶವಾಗಲಿದೆ; ಹಣ ಎಣಿಸುವ, ಚಿಲ್ಲರೆ ಕೊಡುವ, ಬ್ಯಾಂಕಿಗೆ ನಗದು ಕೊಂಡೊಯ್ಯುವ ಕಷ್ಟ ತಪ್ಪಲಿದೆ; ಬ್ಯಾಂಕ್ ಸಿಬ್ಬಂದಿ ಮೇಲಿನ ಒತ್ತಡ ಕಡಿಮೆಯಾಗಲಿದೆ; ನೋಟು ಮುದ್ರಣವೆಚ್ಚ ಉಳಿಯಲಿದೆ ಎಂದರು. ಈ ಆರು ವರ್ಷಗಳಲ್ಲಿ, ನೋಟು ಚಲಾವಣೆಯೂ ನಿಲ್ಲಲಿಲ್ಲ ಮತ್ತು ನೋಟು ಮುದ್ರಣವೆಚ್ಚವೂ ಕಡಿಮೆಯಾಗಲಿಲ್ಲ. ಆರ್‌ಬಿಐನ ಅಧಿಕೃತ ಅಂಕಿಅಂಶಗಳ ಪ್ರಕಾರವೇ 202021ರಲ್ಲಿ 4,012, 202122ರಲ್ಲಿ 4,985, 202223ರಲ್ಲಿ 4,683, 202324ರಲ್ಲಿ 5,101, 202425ರಲ್ಲಿ 6,373 ಕೋಟಿ ರೂ.ಗಳನ್ನು ನೋಟುಗಳ ಮುದ್ರಣಕ್ಕಾಗಿ ಖರ್ಚು ಮಾಡಲಾಗಿದೆಯಂತೆ.

ಅಂದಮೇಲೆ ತಂತ್ರಜ್ಞಾನ ಯಾರ ಬದುಕನ್ನು ಹಸನುಗೊಳಿಸುತ್ತಿದೆ, ಯಾರ ಬದುಕಿಗೆ ಕೊಳ್ಳಿ ಇಡುತ್ತಿದೆ?

ಇರಲಿ, ಈಗ ಮೋದಿಯವರು, ಡಿಜಿಟಲ್ ಪಾವತಿ ವ್ಯವಸ್ಥೆಗೆ ವಾರ್ಷಿಕವಾಗಿ 20,700 ಕೋಟಿ ಖರ್ಚಾಗುತ್ತದೆ, ಅದನ್ನು ಎಂಡಿಆರ್ ಶುಲ್ಕದಿಂದ ಭರಿಸಲಾಗುವುದು ಎಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರಕ್ಕೆ ಈ 20 ಸಾವಿರ ಕೋಟಿ ಸಂಭಾಳಿಸಲಾಗದ ಭಾರೀ ಮೊತ್ತವೇ? ಹಾಗೆನೋಡಿದರೆ, 2025-26ರ ಹಣಕಾಸು ವರ್ಷದಲ್ಲಿ ಆರ್‌ಬಿಐನಿಂದ 3 ಲಕ್ಷ ಕೋಟಿ, ಬ್ಯಾಂಕಿಂಗ್ ವಲಯದಿಂದ 4.11 ಲಕ್ಷ ಕೋಟಿ, ಡಿಜಿಟಲ್ ಪಾವತಿ ನಿರ್ವಹಿಸುವ ಎನ್‌ಪಿಸಿಐಯಿಂದ 1,888 ಕೋಟಿ- ಅಂದರೆ, ಒಂದೇ ವರ್ಷದಲ್ಲಿ 8,899 ಲಕ್ಷ ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದ ಖಜಾನೆ ಸೇರಿದೆ.

ಈ 8,899 ಲಕ್ಷ ಕೋಟಿಯಲ್ಲಿ, ಡಿಜಿಟಲ್ ಪಾವತಿ ವ್ಯವಸ್ಥೆಗಾಗಿ- ದೇಶದ ಜನರಿಗಾಗಿ- 20 ಸಾವಿರ ಕೋಟಿಯನ್ನು ಖರ್ಚು ಮಾಡುವುದು ಕಷ್ಟವೇ? ಇದನ್ನೂ ದೇಶದ ಜನರನ್ನು ಹಿಂಡಿ ಕಿತ್ತುಕೊಳ್ಳಬೇಕೇ? ಇದು ದರೋಡೆಯಲ್ಲವೇ?

ಇದಷ್ಟೇ ಅಲ್ಲ, ಮೋದಿಯವರ ಸರ್ಕಾರ ಆಗಸ್ಟ್‌ನಲ್ಲಿ ಟ್ಯಾಕ್ಸೇಷನ್ ಅಂಡ್ ಅದರ್ ಲಾಸ್ ಅಮೆಂಡ್ಮೆಂಟ್ ಬಿಲ್ಲನ್ನು ಲೋಕಸಭೆಯಲ್ಲಿ ಮಂಡಿಸಿತು. ಆ ಮೂಲಕ ಉಚಿತ ಡಿಜಿಟಲ್ ವಹಿವಾಟುಗಳ ಮೇಲೆ ವ್ಯಾಪಾರಿ ರಿಯಾಯಿತಿ ದರ(ಎಂಡಿಆರ್) ವಿಧಿಸುವ ಮಾರ್ಗ ತೆರೆದುಕೊಂಡಿತು. ಆಗಸ್ಟ್ 6ರಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಎಂಡಿಆರ್ ಕುರಿತು ಯಾವುದೇ ನಿರ್ಧಾರ ಕೈಗೊಳ್ಳಲಾಗಿಲ್ಲ ಎಂದರು. ಆಗಸ್ಟ್ 10ರಂದು, ಎಂಡಿಆರ್‌ಗೆ ಸಂಬಂಧಿಸಿದ ಯಾವುದೇ ಚೌಕಟ್ಟು ಅಂತಿಮಗೊಳಿಸಲಾಗಿಲ್ಲ ಎಂದರು. ಆದರೆ, ಸೆಪ್ಟೆಂಬರ್ 14ರಂದು ಅಧಿಸೂಚನೆ ಹೊರಡಿಸಿ ಎಂಡಿಆರ್ ಶುಲ್ಕ ವಿಧಿಸಿದರು. ಇದು ದೇಶದ ಜನರಿಗೆ ಹಣಕಾಸು ಸಚಿವರು ಹೇಳಿದ ಸುಳ್ಳಲ್ಲವೇ?

ನಾವು ಒಂದು ವಸ್ತುವನ್ನು ಯುಪಿಐ ಮೂಲಕ ಖರೀದಿಸಿದರೆ, ಅದಕ್ಕೆ ತೆರಿಗೆ ತೆರಬೇಕು. ಸಾಲದು ಎಂದು ಈಗ ಶುಲ್ಕವನ್ನೂ ಭರಿಸಬೇಕು. ಇದು ಪ್ರಧಾನಿ ಮೋದಿಯವರ ಡಿಜಿಟಲ್ ದರೋಡೆಯಲ್ಲವೇ? ದೇಶ ನಗದುರಹಿತವಾಗಲಿಲ್ಲ, ನೋಟು ಮುದ್ರಣ ವೆಚ್ಚ ಕಡಿಮೆಯಾಗಲಿಲ್ಲ, ಡಿಜಿಟಲ್ ವ್ಯವಸ್ಥೆ ಜನರ ನೆರವಿಗೆ ಬರಲಿಲ್ಲ, ಸೈಬರ್ ಸಮಸ್ಯೆಗಳನ್ನೂ ಸರ್ಕಾರ ಪರಿಹರಿಸಲಿಲ್ಲ. ಇಂತಹ ಆಡಳಿತವನ್ನು ಪ್ರಶ್ನಿಸುವವರು ದೇಶದ್ರೋಹಿಗಳೇ?

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಹೂಥಿಗಳು ಯಾರು? ಅವರು ಮೆಕ್ಕಾವನ್ನೇ ಗುರಿಯಾಗಿಸಿದ್ದರೇ?

ಇರಾನ್‌ನ ಪ್ರತಿರೋಧ ಅಕ್ಷದ ಪ್ರಮುಖ ಭಾಗವಾಗಿರುವ ಹೂಥಿಗಳು ಈಗ ಇಸ್ರೇಲ್, ಸೌದಿ ಅರೇಬಿಯಾ ಮತ್ತು ಕೆಂಪು ಸಮುದ್ರದ ಭದ್ರತಾ ಸಮೀಕರಣಗಳ ಕೇಂದ್ರದಲ್ಲಿ ನಿಂತಿದ್ದಾರೆ. ಮೆಕ್ಕಾವನ್ನೇ ಗುರಿಯಾಗಿಸಿ ಡ್ರೋನ್ ಕಳುಹಿಸಲಾಗಿದೆ ಎಂಬ ಸೌದಿ ಆರೋಪದ ಬಳಿಕ ಹೂಥಿಗಳ ಸಾಮರ್ಥ್ಯ ಮತ್ತು ಉದ್ದೇಶಗಳ ಬಗ್ಗೆ ಮತ್ತೆ ಜಾಗತಿಕ ಚರ್ಚೆ ಆರಂಭವಾಗಿದೆ.

ಮಧ್ಯಪ್ರಾಚ್ಯದಲ್ಲಿ ಇರಾನ್-ಅಮೆರಿಕ ಯುದ್ಧದ ಆಚೆಗೂ ನಾನಾ ಬೆಳವಣಿಗೆಗಳು ನಡೆಯುತ್ತಿವೆ. ಯೆಮನ್‌ನ ಹೂಥಿ ಬಂಡುಕೋರರು ಕೆಂಪು ಸಮುದ್ರದ ಮೇಲೆ ಭಾರೀ ಪರಿಣಾಮ ಬೀರುತ್ತಿದ್ದಾರೆ. ಯೆಮನ್ನ ಪ್ರಮುಖ ಬಂದರುಗಳಲ್ಲಿ ಒಂದಾದ ಮೋಖಾ ಬಂದರು ಸೇರಿದಂತೆ ಹಲವು ಪ್ರಮುಖ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದಾರೆ. ಬ್ಯಾಬ್ ಎಲ್-ಮಾಂಡೆಬ್ ಜಲಸಂಧಿಗೆ ಹೊಂದಿಕೊಂಡಿರುವ ಕರಾವಳಿ ಮತ್ತು ದ್ವೀಪಗಳ ಮೇಲಿನ ಅವರ ಹಿಡಿತ ಮತ್ತಷ್ಟು ಬಲಗೊಂಡಿದೆ. ಇದರಿಂದ ಕೆಂಪು ಸಮುದ್ರದ ಮೂಲಕ ಸಾಗುವ ಜಾಗತಿಕ ಹಡಗು ಸಂಚಾರದ ಮೇಲೆ ಭಾರೀ ಪ್ರಭಾವ ಬೀರುತ್ತಿದ್ದಾರೆ.

ಇದೇ ಸಮಯದಲ್ಲಿ ಹೂಥಿಗಳು ಸೌದಿ ಅರೇಬಿಯಾದ ಸೈನಿಕ ನೆಲೆಗಳು, ಇಂಧನ ಮೂಲಸೌಕರ್ಯ ಹಾಗೂ ಇತರೆ ಗುರಿಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸಿದ್ದಾರೆ. ಯೆಮನ್‌ನಲ್ಲಿ ಸೌದಿ ಬೆಂಬಲಿತ ಪಡೆಗಳ ವಿರುದ್ಧವೂ ಅವರ ಯುದ್ಧ ತೀವ್ರಗೊಂಡಿದೆ. ಮತ್ತೊಂದೆಡೆ, ಸೌದಿ ಅರೇಬಿಯಾ ಹೂಥಿ ನಿಯಂತ್ರಿತ ಪ್ರದೇಶಗಳ ಮೇಲೆ ವಾಯುದಾಳಿಗಳನ್ನು ನಡೆಸುತ್ತಿದೆ. ಹೀಗಾಗಿ ಒಂದು ದಶಕಕ್ಕೂ ಹೆಚ್ಚು ಕಾಲ ಮುಂದುವರಿದ ಯೆಮನ್ ಸಂಘರ್ಷ ಮತ್ತೆ ದೊಡ್ಡ ಪ್ರಾದೇಶಿಕ ಯುದ್ಧದ ಭಾಗವಾಗುವ ಅಪಾಯ ಎದುರಾಗಿದೆ.

ಆದರೆ, ಈಗ ಹೂಥಿಗಳ ಹೆಸರು ಮತ್ತಷ್ಟು ದೊಡ್ಡ ವಿವಾದಕ್ಕೆ ಕಾರಣವಾಗಿದೆ. ಇಸ್ಲಾಂ ಧರ್ಮದ ಅತ್ಯಂತ ಪವಿತ್ರ ನಗರವಾದ ಮೆಕ್ಕಾವನ್ನೇ ಹೂಥಿಗಳು ಗುರಿಯಾಗಿಸಿದ್ದಾರೆ ಎಂದು ಸೌದಿ ಅರೇಬಿಯಾ ಆರೋಪಿಸುತ್ತಿದೆ. ಆದರೆ, ಈ ಆರೋಪಗಳಿಗೆ ಯಾವುದೇ ಪುರಾವೆಗಳಲ್ಲವೆಂದು ಅಂತಾರಾಷ್ಟ್ರೀಯ ಮಾಧ್ಯಮಗಳ ವರದಿಗಳು ಹೇಳುತ್ತಿವೆ.

ಸೆಪ್ಟೆಂಬರ್ 16ರಂದು ಸೌದಿ ಅರೇಬಿಯಾ ನೇತೃತ್ವದ ಸೇನಾ ಮೈತ್ರಿಕೂಟ, ಮೆಕ್ಕಾದ ದಕ್ಷಿಣ ಭಾಗದಲ್ಲಿ ಹೂಥಿಗಳಿಗೆ ಸೇರಿದ ಡ್ರೋನ್ ಒಂದನ್ನು ಹೊಡೆದುರುಳಿಸಲಾಗಿದೆ ಎಂದು ಘೋಷಿಸಿತ್ತು. ಆ ಡ್ರೋನ್ ಮೆಕ್ಕಾದ ನಿರ್ಬಂಧಿತ ವಾಯುಪ್ರದೇಶದತ್ತ ಬರುತ್ತಿತ್ತು ಎಂದು ಸೌದಿ ಹೇಳಿಕೊಂಡಿದೆ. ಮೆಕ್ಕಾದ ಸುರಕ್ಷತೆ ತಮ್ಮ ಪಾಲಿಗೆ ರೆಡ್ ಲೈನ್ ಎಂದು ಸೌದಿ ಸೇನಾ ವಕ್ತಾರರು ಹೇಳಿಕೊಂಡಿದ್ದಾರೆ.

ಆದರೆ, ಹೂಥಿಗಳು ಈ ಆರೋಪವನ್ನು ನಿರಾಕರಿಸಿದ್ದಾರೆ. ಮೆಕ್ಕಾವನ್ನಾಗಲಿ, ಇಸ್ಲಾಮಿನ ಯಾವುದೇ ಪವಿತ್ರ ಸ್ಥಳವನ್ನಾಗಲಿ ಗುರಿಯಾಗಿಸಿಲ್ಲ ಎಂದು ಅವರು ಹೇಳಿದ್ದಾರೆ. ಹೀಗಾಗಿ, ಡ್ರೋನ್ ನಿಜವಾಗಿಯೂ ಮೆಕ್ಕಾ ನಗರವೇ ಗುರಿಯಾಗಿಸಿಕೊಂಡಿತ್ತೇ, ಬೇರೆ ಸೌದಿ ಸೈನಿಕ ಅಥವಾ ಮೂಲಸೌಕರ್ಯಗಳ ಗುರಿಯತ್ತ ಸಾಗುತ್ತಿತ್ತೇ ಎಂಬುದಕ್ಕೆ ಸ್ವತಂತ್ರವಾದ ಸಾರ್ವಜನಿಕ ಸಾಕ್ಷ್ಯ ಇನ್ನೂ ಲಭ್ಯವಿಲ್ಲ. ಆದ್ದರಿಂದ, ಹೂಥಿಗಳು ಮೆಕ್ಕಾವನ್ನೇ ಗುರಿಯಾಗಿಸಿ ದಾಳಿ ಮಾಡಿದ್ದಾರೆ ಎಂದು ನಿರ್ಧಾರಕ್ಕೆ ಬರಲು ಸಾಧ್ಯವೂ ಇಲ್ಲ.

ಸೆಪ್ಟೆಂಬರ್ 15ರಂದು ಮೆಕ್ಕಾ ಮತ್ತು ಜೆದ್ದಾ ಸೇರಿದಂತೆ ಸೌದಿ ಅರೇಬಿಯಾದ ಹಲವು ಪ್ರದೇಶಗಳಲ್ಲಿ ವಾಯುದಾಳಿಯ ಎಚ್ಚರಿಕೆ ನೀಡಲಾಗಿತ್ತು. ಆದರೆ, ಆ ಸಂದರ್ಭದಲ್ಲಿ ಯಾವುದೇ ಕ್ಷಿಪಣಿ ಅಥವಾ ಡ್ರೋನ್ ಮೆಕ್ಕಾದೊಳಗೆ ಬಿದ್ದಿರುವುದಾಗಿ ಸೌದಿ ಅಧಿಕಾರಿಗಳು ಸ್ಪಷ್ಟಪಡಿಸಿಲ್ಲ. ದಾಳಿಯ ಹೊಣೆ ಹೊತ್ತುಕೊಂಡ ತಕ್ಷಣದ ಹೇಳಿಕೆಗಳೂ ಬಂದಿಲ್ಲ.

ಅಂದಹಾಗೆ, ಇದು ಮೊದಲ ಬಾರಿಗೆ ಎದ್ದಿರುವ ವಿವಾದವೂ ಅಲ್ಲ. 2016ರ ಅಕ್ಟೋಬರ್‌ನಲ್ಲಿ ಯೆಮನ್‌ನಿಂದ ಹಾರಿಸಲಾದ ಹೂಥಿ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಮೆಕ್ಕಾದಿಂದ ಸುಮಾರು 65 ಕಿ.ಮೀ. ದೂರದಲ್ಲಿ ತಡೆದು ನಾಶಪಡಿಸಿದ್ದೇವೆ ಎಂದು ಸೌದಿ ನೇತೃತ್ವದ ಮೈತ್ರಿಕೂಟ ಹೇಳಿತ್ತು. ಆದರೆ, ಹೂಥಿಗಳು ಕ್ಷಿಪಣಿಯನ್ನು ಹಾರಿಸಿದ್ದನ್ನು ಒಪ್ಪಿಕೊಂಡಿದ್ದರೂ ಅದರ ಗುರಿ ಮೆಕ್ಕಾ ಅಲ್ಲ, ಜೆದ್ದಾದಲ್ಲಿರುವ ಕಿಂಗ್ ಅಬ್ದುಲ್ ಅಜೀಜ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೇಳಿದ್ದರು. ಆಗಲೂ ಮೆಕ್ಕಾವನ್ನು ಗುರಿಯಾಗಿಸಲಾಗಿತ್ತು ಎಂದೇ ಸೌದಿ ಆರೋಪಿಸಿತ್ತು. ಆದರೆ, ಜೆದ್ದಾ ವಿಮಾನ ನಿಲ್ದಾಣವೇ ತಮ್ಮ ಗುರಿಯಾಗಿತ್ತು ಎಂದು ಹೂಥಿಗಳು ಹೇಳಿದ್ದರು. ಸೌದಿಯ ಆರೋಪವನ್ನು ನಿರಾಕರಿಸಿದ್ದರು.

ಹೂಥಿಗಳು ಯಾರು?

ಹೂಥಿಗಳ ಕಥೆ ಆರಂಭವಾಗುವುದು ಯೆಮನ್‌ನ ಉತ್ತರ ಭಾಗದಿಂದ. ಯೆಮನ್ ಮುಸ್ಲಿಂ ಬಹುಸಂಖ್ಯಾತ ದೇಶವಾಗಿದ್ದರೂ, ಅದರ ಉತ್ತರದ ಎತ್ತರ ಪ್ರದೇಶಗಳಲ್ಲಿ ಜೈದಿ ಅಥವಾ ರ್ಝೈದಿ ಶಿಯಾ ಸಮುದಾಯಕ್ಕೆ ದೀರ್ಘ ಇತಿಹಾಸವಿದೆ. ಹೂಥಿ ಚಳವಳಿಯ ಸಾಮಾಜಿಕ ಮತ್ತು ಧಾರ್ಮಿಕ ಬೇರುಗಳು ಇದೇ ಸಮುದಾಯದಲ್ಲಿವೆ.

1990ರ ದಶಕದ ಕೊನೆಯ ಭಾಗದಲ್ಲಿ ಉತ್ತರ ಯೆಮನ್‌ನಲ್ಲಿ ಜೈದಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಪುನರುಜ್ಜೀವನ ಚಳವಳಿಯಾಗಿ ಸಂಘಟನೆಯೊಂದು ರೂಪುಗೊಳ್ಳತೊಡಗಿತು. ಹುಸೈನ್ ಬದ್ರುದ್ದೀನ್ ಅಲ್-ಹೂಥಿ ಅದರ ಪ್ರಮುಖ ನಾಯಕನಾಗಿ ಹೊರಹೊಮ್ಮಿದರು. ಅವರ ಹೆಸರಿನಿಂದಲೇ ನಂತರ ಸಂಘಟನೆಯನ್ನು ಹೂಥಿಗಳು ಎಂದು ಕರೆಯಲಾಯಿತು. ಸಂಘಟನೆಯ ಅಧಿಕೃತ ಹೆಸರು ಅನ್ಸಾರ್ ಅಲ್ಲಾ ಅಂದರೆ ದೇವರ ಬೆಂಬಲಿಗರು.

ಆರಂಭದಲ್ಲಿ ಇದು ಕೇವಲ ಸಶಸ್ತ್ರ ಸೇನೆಯಾಗಿರಲಿಲ್ಲ. ಜೈದಿ ಸಮುದಾಯದ ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಸ್ಥಾನಮಾನ ಕುಗ್ಗುತ್ತಿದೆ ಎಂಬ ಅಸಮಾಧಾನ ಈ ಸಂಘಟನೆಯ ಹುಟ್ಟಿಗೆ ಕಾರಣವಾಗಿತ್ತು. ಆನಂತರದಲ್ಲಿ, ಯೆಮನ್ನ ಕೇಂದ್ರ ಸರ್ಕಾರದ ನೀತಿಗಳು, ಭ್ರಷ್ಟಾಚಾರ, ಸೌದಿ ಧಾರ್ಮಿಕ ಪ್ರಭಾವ ಹಾಗೂ ಅಮೆರಿಕದ ಮಧ್ಯಪ್ರಾಚ್ಯ ನೀತಿಗಳ ವಿರುದ್ಧವೂ ಈ ಸಂಘಟನೆ ಧ್ವನಿ ಎತ್ತಿತು.

ಕ್ರಮೇಣ ಸರ್ಕಾರ ಮತ್ತು ಚಳವಳಿಯ ನಡುವಿನ ಸಂಘರ್ಷ ಸಶಸ್ತ್ರ ಹೋರಾಟವಾಗಿ ಬದಲಾಯಿತು. 2004ರಿಂದ ಯೆಮನ್ ಸರ್ಕಾರ ಮತ್ತು ಹೂಥಿಗಳ ನಡುವೆ ಹಲವು ಸುತ್ತಿನ ಯುದ್ಧಗಳು ನಡೆದವು. ಸಂಘಟನೆಯ ನೇತಾರ ಹುಸೈನ್ ಅಲ್-ಹೂಥಿ ಅವರು 2004ರಲ್ಲಿ ಯೆಮನ್ ಸೇನೆಯ ಕಾರ್ಯಾಚರಣೆಯಲ್ಲಿ ಮೃತಪಟ್ಟರೂ ಚಳವಳಿ ನಿಲ್ಲಲಿಲ್ಲ. ಅವರ ಸಹೋದರ ಅಬ್ದುಲ್ ಮಲಿಕ್ ಅಲ್-ಹೂಥಿ ಅವರು ಸಂಘಟನೆಯ ಪ್ರಮುಖ ನಾಯಕನಾಗಿ ಹೊರಹೊಮ್ಮಿದರು. ಇಂದಿಗೂ ಅಬ್ದುಲ್ ಮಲಿಕ್ ಅಲ್-ಹೂಥಿಯೇ ಸಂಘಟನೆಯ ಅತ್ಯಂತ ಪ್ರಭಾವಿ ನಾಯಕನಾಗಿದ್ದಾರೆ.

2014ರಲ್ಲಿ ಸನಾ ವಶ: ಬಂಡುಕೋರರಿಂದ ಆಡಳಿತ ಶಕ್ತಿಯವರೆಗೆ



2011ರ ಅರಬ್ ಸ್ಪ್ರಿಂಗ್ ಯೆಮನ್‌ನ ರಾಜಕೀಯ ವ್ಯವಸ್ಥೆಯನ್ನು ತೀವ್ರವಾಗಿ ಅಸ್ಥಿರಗೊಳಿಸಿತು. ದೀರ್ಘಕಾಲ ಅಧ್ಯಕ್ಷರಾಗಿದ್ದ ಅಲಿ ಅಬ್ದುಲ್ಲಾ ಸಲೇಹ್ ಅಧಿಕಾರ ಕಳೆದುಕೊಂಡ ನಂತರ ಅಬ್ದ್ ರಬ್ಬು ಮನ್ಸೂರ್ ಹಾದಿ ನೇತೃತ್ವದಲ್ಲಿ ರಾಜಕೀಯ ಪರಿವರ್ತನೆಯ ಪ್ರಯತ್ನಗಳು ನಡೆದವು.

ಆದರೆ ದುರ್ಬಲ ಕೇಂದ್ರ ಸರ್ಕಾರ, ಆಂತರಿಕ ರಾಜಕೀಯ ಸಂಘರ್ಷ ಮತ್ತು ಆರ್ಥಿಕ ಬಿಕ್ಕಟ್ಟನ್ನು ಹೂಥಿಗಳು ತಮ್ಮ ಪರವಾಗಿ ಬಳಸಿಕೊಂಡರು. 2014ರಲ್ಲಿ ಅವರು ರಾಜಧಾನಿ ಸನಾವನ್ನು ವಶಪಡಿಸಿಕೊಂಡರು. ಇದರಿಂದ ಗಲ್ಫ್ ರಾಷ್ಟ್ರಗಳ ಬೆಂಬಲದೊಂದಿಗೆ ನಡೆಯುತ್ತಿದ್ದ ರಾಜಕೀಯ ಪರಿವರ್ತನೆ ಕುಸಿಯಿತು. ಆಗ ಅಧಿಕಾರ ಕಳೆದುಕೊಂಡ ಯೆಮನ್ ಅಧ್ಯಕ್ಷ ಹಾದಿ, ದೇಶಬಿಟ್ಟು ಹೊರಹೋಗಬೇಕಾಯಿತು.

ಇದಕ್ಕೆ ಪ್ರತಿಕ್ರಿಯೆಯಾಗಿ 2015ರಲ್ಲಿ ಸೌದಿ ಅರೇಬಿಯಾ ನೇತೃತ್ವದ ಅರಬ್ ಮೈತ್ರಿಕೂಟ ಯೆಮನ್‌ನಲ್ಲಿ ದೊಡ್ಡ ಮಟ್ಟದ ಸೈನಿಕ ಹಸ್ತಕ್ಷೇಪ ಆರಂಭಿಸಿತು. ಹೂಥಿಗಳನ್ನು ಹಿಮ್ಮೆಟ್ಟಿಸಿ ಹಾದಿ ಸರ್ಕಾರವನ್ನು ಮರುಸ್ಥಾಪಿಸುವುದು ಸೌದಿ ಅರೇಬಿಯಾದ ಉದ್ದೇಶವಾಗಿತ್ತು.

ಆದರೆ, ವರ್ಷಗಳ ವಾಯುದಾಳಿ ಮತ್ತು ಯುದ್ಧದ ನಂತರವೂ ಹೂಥಿಗಳನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಬದಲಾಗಿ, ಹೂಥಿಗಳು ಮತ್ತಷ್ಟು ಸಂಘಟಿತ ಸೈನಿಕ ಶಕ್ತಿಯಾಗಿ ಬೆಳೆದರು.

ಪರಿಣಾಮವಾಗಿ, ಹೂಥಿಗಳನ್ನು ಇಂದಿಗೂ ಹಿಮ್ಮೆಟ್ಟಲು ಸಾಧ್ಯವಾಗಿಲ್ಲ. ಯೆಮನ್‌ನ ರಾಜಧಾನಿ ಸನಾ ಇಂದಿಗೂ ಹೂತಿಗಳ ಆಡಳಿತದಲ್ಲಿಯೇ ಇದೆ. ಆದರೆ, ಅಂತರರಾಷ್ಟ್ರೀಯವಾಗಿ ಮಾನ್ಯತೆ ಪಡೆದ ಯೆಮನ್ ಸರ್ಕಾರವು ದಕ್ಷಿಣದ ಏಡನ್ ಅನ್ನು ತಾತ್ಕಾಲಿಕ ರಾಜಧಾನಿಯಾಗಿ ಬಳಸುತ್ತಿದೆ.

2022ರಲ್ಲಿ ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಲ್ಲಿ ಕದನವಿರಾಮ ಜಾರಿಯಾಗಿ ದೊಡ್ಡ ಪ್ರಮಾಣದ ಸಂಘರ್ಷ ಕಡಿಮೆಯಾಗಿತ್ತು. ಆದರೆ, ಅದು ಶಾಶ್ವತ ರಾಜಕೀಯ ಒಪ್ಪಂದವಾಗಿ ರೂಪುಗೊಳ್ಳಲಿಲ್ಲ. 2026ರಲ್ಲಿ ಮತ್ತೆ ಹಲವು ಯುದ್ಧರಂಗಗಳಲ್ಲಿ ಸಂಘರ್ಷ ತೀವ್ರಗೊಂಡಿದೆ.

ಇರಾನ್‌ನ ಪ್ರತಿರೋಧ ಅಕ್ಷದಲ್ಲಿ ಹೂಥಿಗಳ ಪಾತ್ರ

ಹೂಥಿಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಇರಾನ್ ರೂಪಿಸಿಕೊಂಡಿರುವ ಪ್ರಾದೇಶಿಕ ಮೈತ್ರಿ ಜಾಲವನ್ನೂ ಅರ್ಥಮಾಡಿಕೊಳ್ಳಬೇಕು.

ಇರಾನ್ ಬೆಂಬಲಿಸುವ ಹಲವು ಸಶಸ್ತ್ರ ಮತ್ತು ರಾಜಕೀಯ ಸಂಘಟನೆಗಳನ್ನು ಸಾಮಾನ್ಯವಾಗಿ (ಪ್ರತಿರೋಧ ಅಕ್ಷ) ಎಂದು ಕರೆಯಲಾಗುತ್ತದೆ. ಲೆಬನಾನ್‌ನ ಹಿಜ್ಬುಲ್ಲಾ, ಪ್ಯಾಲೆಸ್ತೀನ್‌ನ ಹಮಾಸ್ ಮತ್ತು ಇಸ್ಲಾಮಿಕ್ ಜಿಹಾದ್, ಇರಾಕ್‌ನ ಕೆಲವು ಶಿಯಾ ಸಶಸ್ತ್ರ ಸಂಘಟನೆಗಳು ಹಾಗೂ ಯೆಮನ್‌ನ ಹೂಥಿಗಳು ಈ ವಿಶಾಲ ಜಾಲದ ಭಾಗವಾಗಿದ್ದಾರೆ.

ಹೂಥಿಗಳಿಗೆ ಇರಾನ್ ಸೈನಿಕ ತಂತ್ರಜ್ಞಾನ, ಕ್ಷಿಪಣಿ ಹಾಗೂ ಡ್ರೋನ್ ಪರಿಣತಿ, ತರಬೇತಿ ಮತ್ತು ಇತರೆ ನೆರವು ನೀಡುತ್ತಿದೆ. ಇರಾನ್ ಮತ್ತು ಹಿಜ್ಬುಲ್ಲಾದ ತರಬೇತಿಗಳು ಹೂಥಿಗಳನ್ನು ಹೆಚ್ಚು ಸಂಘಟಿತ ಸೈನಿಕ ಶಕ್ತಿಯಾಗಿ ರೂಪಿಸಲು ಪ್ರಮುಖ ಪಾತ್ರ ವಹಿಸಿವೆ. ಆದಾಗ್ಯೂ, ಇರಾನ್ ಶಸ್ತ್ರಾಸ್ತ್ರ ನಿರ್ಬಂಧ ಉಲ್ಲಂಘಿಸಿ ಹೂಥಿಗಳಿಗೆ ಶಸ್ತ್ರಾಸ್ತ್ರ ನೀಡುತ್ತಿದೆ ಎಂಬ ವಿಶ್ವಸಂಸ್ಥೆಯ ಆರೋಪಗಳನ್ನು ಇರಾನ್ ಕಡಾಖಂಡಿತವಾಗಿ ನಿರಾಕರಿಸುತ್ತಲೇ ಬಂದಿದೆ.

ಹಮಾಸ್, ಹಿಜ್ಬುಲ್ಲಾ ದುರ್ಬಲವಾದರೂ ಹೂಥಿಗಳು ಪ್ರಬಲವಾಗಿದ್ದು ಹೇಗೆ?

ಪ್ಯಾಲೆಸ್ತೀನ್‌ನ ವಿಮೋಚನೆಗಾಗಿ ಹೋರಾಡುತ್ತಿರುವ ಹಮಾಸ್, 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ದಾಳಿ ನಡೆದಿತು. ಆ ಬಳಿಕ, ಗಾಜಾ ಮೇಲೆ ಇಸ್ರೇಲ್ ಭೀಕರ ದಾಳಿ ನಡೆಸಲಾರಂಭಿಸಿತು. ಹೂಥಿಗಳು ಪ್ಯಾಲೆಸ್ತೀನಿಯರ ಬೆಂಬಲಕ್ಕೆ ನಿಂತಿರುವುದಾಗಿ ಘೋಷಿಸಿ ಇಸ್ರೇಲ್ ಕಡೆಗೆ ಕ್ಷಿಪಣಿ ಮತ್ತು ಡ್ರೋನ್‌ಗಳನ್ನು ಹಾರಿಸಲು ಆರಂಭಿಸಿದರು. ಅದೇ ಸಮಯದಲ್ಲಿ ಕೆಂಪು ಸಮುದ್ರದ ವಾಣಿಜ್ಯ ಹಡಗುಗಳ ಮೇಲೂ ದಾಳಿ ನಡೆಸಿದರು.

ಕಳೆದ ಮೂರು ವರ್ಷಗಳಲ್ಲಿ, ಲೆಬನಾನ್‌ನ ಹಿಜ್ಬುಲ್ಲಾ ಮತ್ತು ಹಮಾಸ್‌ನ ನಾಯಕತ್ವ ಹಾಗೂ ಸೈನಿಕ ವ್ಯವಸ್ಥೆಗೆ ಇಸ್ರೇಲ್ ಭಾರೀ ಹೊಡೆತ ನೀಡಿದೆ. ಈ ಸಮಯದಲ್ಲಿ, ಇರಾನ್‌ನ ಅರಬ್ ಮಿತ್ರರಲ್ಲಿ ಹೂಥಿಗಳ ಶಕ್ತಿಯು ಮಹತ್ವ ಪಡೆದುಕೊಂಡಿದೆ. ಅಬ್ದುಲ್ ಮಲಿಕ್ ಅಲ್-ಹೂಥಿ ಈಗ ಇರಾನ್‌ನ ಅತ್ಯಂತ ಪ್ರಮುಖ ಮತ್ತು ಉಳಿದುಕೊಂಡಿರುವ ಅರಬ್ ಮಿತ್ರರಲ್ಲಿ ಒಬ್ಬನಾಗಿ ಹೊರಹೊಮ್ಮಿದ್ದಾನೆ.

ಕೆಂಪು ಸಮುದ್ರದ ಮೇಲೆ ಹೂಥಿಗಳ ಹಿಡಿತ ಜಗತ್ತಿನ ಆತಂಕ

ಯೆಮನ್‌ನ ಭೌಗೋಳಿಕ ಸ್ಥಾನವೇ ಹೂಥಿಗಳಿಗೆ ಅಸಾಧಾರಣ ಪ್ರಭಾವ ನೀಡುತ್ತದೆ. ಯೆಮನ್‌ನ ಪಶ್ಚಿಮ ಕರಾವಳಿಯ ಕೆಳಭಾಗದಲ್ಲಿರುವ ಬ್ಯಾಬ್ ಎಲ್-ಮಾಂಡೆಬ್ ಜಲಸಂಧಿ ಕೆಂಪು ಸಮುದ್ರವನ್ನು ಅಡೆನ್ ಕೊಲ್ಲಿ ಮತ್ತು ಅರಬ್ಬಿ ಸಮುದ್ರಕ್ಕೆ ಸಂಪರ್ಕಿಸುತ್ತದೆ.

ಇದು ಸಾಮಾನ್ಯ ಸಮುದ್ರ ಮಾರ್ಗವಲ್ಲ. ಏಷ್ಯಾ ಮತ್ತು ಯೂರೋಪ್ ನಡುವಿನ ಬಹುತೇಕ ಹಡಗುಗಳು ಇಲ್ಲಿಂದ ಕೆಂಪು ಸಮುದ್ರಕ್ಕೆ ಪ್ರವೇಶಿಸಿ, ನಂತರ ಸೂಯೆಝ್ ಕಾಲುವೆ ಮೂಲಕ ಮೆಡಿಟರೇನಿಯನ್ ಸಮುದ್ರಕ್ಕೆ ಸಾಗುತ್ತವೆ.

ಅಮೆರಿಕದ ಇಂಧನ ಮಾಹಿತಿ ಸಂಸ್ಥೆ () ಪ್ರಕಾರ, 2023ರ ಮೊದಲಾರ್ಧದಲ್ಲಿ ಜಾಗತಿಕ ಸಮುದ್ರ ಮಾರ್ಗದ ತೈಲ ವ್ಯಾಪಾರದ ಸುಮಾರು 12% ಮತ್ತು ವ್ಯಾಪಾರದ ಸುಮಾರು 8% ಬ್ಯಾಬ್ ಎಲ್-ಮಾಂಡೆಬ್ ಮೂಲಕ ಸಾಗುತ್ತಿತ್ತು. 2023ರ ಕೊನೆಯ ಭಾಗದಲ್ಲಿ ಹೂಥಿಗಳು ವಾಣಿಜ್ಯ ಹಡಗುಗಳ ಮೇಲೆ ದಾಳಿ ಆರಂಭಿಸಿದ ನಂತರ ದೊಡ್ಡ ಹಡಗು ಕಂಪನಿಗಳು ಈ ಮಾರ್ಗವನ್ನು ತಪ್ಪಿಸಲು ಆರಂಭಿಸಿದವು. ಪರಿಣಾಮ, ಆ ಸಂದರ್ಭದಲ್ಲಿ, ಸೂಯೆಝ್ ಕಾಲುವೆಯ ಮೂಲಕ ನಡೆಯುತ್ತಿದ್ದ ವಾರದ ಹಡಗು ಸಂಚಾರ ಸುಮಾರು 42% ಕುಸಿದಿತ್ತು.

ಹಡಗುಗಳು ಕೆಂಪು ಸಮುದ್ರವನ್ನು ತಪ್ಪಿಸಿದರೆ ಅವು ಆಫ್ರಿಕಾದ ದಕ್ಷಿಣ ತುದಿಯ ಕೇಪ್ ಆಫ್ ಗುಡ್ ಹೋಪ್ ಸುತ್ತಿಕೊಂಡು ಯೂರೋಪ್ ತಲುಪಬೇಕಾಗುತ್ತದೆ. ಇದರಿಂದ ಸಾವಿರಾರು ನಾಟಿಕಲ್ ಮೈಲುಗಳ ಹೆಚ್ಚುವರಿ ಪ್ರಯಾಣ, ಹೆಚ್ಚುವರಿ ಇಂಧನ ವೆಚ್ಚ, ವಿಮಾ ಪ್ರೀಮಿಯಂ ಹಾಗೂ ಸರಕು ತಲುಪುವಲ್ಲಿ ಹಲವು ದಿನಗಳ ವಿಳಂಬ ಉಂಟಾಗುತ್ತದೆ.

ಅಂದಾಜಿನ ಪ್ರಕಾರ, ಏಷ್ಯಾ-ಯೂರೋಪ್ ಮಾರ್ಗವನ್ನು ಆಫ್ರಿಕಾ ಸುತ್ತುವಂತೆ ಬದಲಿಸಿದರೆ ಪ್ರಯಾಣಗಳಿಗೆ ಸುಮಾರು 12 ದಿನಗಳಷ್ಟು ಹೆಚ್ಚುವರಿ ಸಮಯ ಬೇಕಾಗುತ್ತದೆ.

2026ರಲ್ಲಿ ಪರಿಸ್ಥಿತಿ ಇನ್ನಷ್ಟು ಅಪಾಯಕಾರಿ?

2023ರ ಸಂಕಷ್ಟದ ವೇಳೆ ಪ್ರಮುಖ ಸಮಸ್ಯೆ ಬ್ಯಾಬ್ ಎಲ್-ಮಾಂಡೆಬ್ ಮತ್ತು ಕೆಂಪು ಸಮುದ್ರವಾಗಿತ್ತು. ಆದರೆ, 2026ರಲ್ಲಿ ಅದಕ್ಕೆ ಇನ್ನೊಂದು ಅತಿದೊಡ್ಡ ಸಮಸ್ಯೆ ಸೇರಿಕೊಂಡಿದೆ. ಅದು; ಹಾರ್ಮುಜ್ ಜಲಸಂಧಿ.

2026ರ ಸೆಪ್ಟೆಂಬರ್ ವೇಳೆಗೆ ಇರಾನ್-ಅಮೆರಿಕ ಸಂಘರ್ಷದಿಂದ ಹಾರ್ಮುಜ್ ಮೂಲಕ ಸಾಗುವ ಹಡಗು ಸಂಚಾರ ತೀವ್ರವಾಗಿ ಕುಸಿದಿದೆ. ಇದೇ ಸಂದರ್ಭದಲ್ಲಿ ಹೂಥಿಗಳು ಯೆಮನ್‌ನ ಕೆಂಪು ಸಮುದ್ರದ ಕರಾವಳಿಯಲ್ಲಿ ತಮ್ಮ ಹಿಡಿತವನ್ನು ಬಲಪಡಿಸಿರುವುದರಿಂದ ಬ್ಯಾಬ್ ಎಲ್-ಮಾಂಡೆಬ್ ಮೇಲೂ ಒತ್ತಡ ಹೆಚ್ಚಾಗಿದೆ.

ಅಂದರೆ, ಪರ್ಷಿಯನ್ ಕೊಲ್ಲಿಯಿಂದ ಹೊರಬರುವ ಹಾರ್ಮುಜ್ ಮಾರ್ಗ ಮತ್ತು ಕೆಂಪು ಸಮುದ್ರಕ್ಕೆ ಪ್ರವೇಶಿಸುವ ಬ್ಯಾಬ್ ಎಲ್-ಮಾಂಡೆಬ್‌ಜಗತ್ತಿನ ಇಂಧನ ಮತ್ತು ಸರಕು ಸಾಗಣೆಯ ಎರಡು ಅತ್ಯಂತ ಪ್ರಮುಖ ಚೋಕ್ ಪಾಯಿಂಟ್‌ಗಳು ಒಂದೇ ಸಮಯದಲ್ಲಿ ಅಸ್ಥಿರವಾಗಿದ್ದು, ಜಾಗತಿಕ ವಹಿವಾಟಿನ ಮೇಲೆ ಭಾರೀ ಪರಿಣಾಮ ಬೀರಿದೆ.

ಭಾರತದ ಮೇಲಿನ ಪರಿಣಾಮ

ಇರಾನ್-ಅಮೆರಿಕ ಸಂಘರ್ಷ ಮತ್ತು ಇಸ್ರೇಲ್-ಸೌದಿ-ಹೂತಿಗಳ ನಡುವಿನ ತಿಕ್ಕಾಟವು ಭಾರತದ ಪಾಲಿಗೂ ಸಮಸ್ಯೆಯನ್ನು ಹುಟ್ಟುಹಾಕಿದೆ. ಭಾರತ ಮತ್ತು ಯೂರೋಪ್ ನಡುವಿನ ಸರಕು ವ್ಯಾಪಾರದ ಸುಮಾರು 80% ವಹಿವಾಟು ಸಾಮಾನ್ಯವಾಗಿ ಕೆಂಪು ಸಮುದ್ರದ ಮಾರ್ಗವನ್ನು ಬಳಸುತ್ತದೆ. 2023-24ರ ಕೆಂಪು ಸಮುದ್ರ ಸಂಕಷ್ಟದ ವೇಳೆ ಹಲವು ಹಡಗುಗಳು ಕೇಪ್ ಆಫ್ ಗುಡ್ ಹೋಪ್ ಮಾರ್ಗಕ್ಕೆ ತಿರುಗಿದಾಗ ಭಾರತದಿಂದ ಯೂರೋಪ್‌ಗೆ ಸಾಗುವ ಹಡಗು ಪ್ರಯಾಣಗಳಿಗೆ ಸುಮಾರು 4,000ರಿಂದ 6,000 ನಾಟಿಕಲ್ ಮೈಲು ಹೆಚ್ಚುವರಿ ದೂರ ಮತ್ತು 14ರಿಂದ 20 ದಿನಗಳ ಹೆಚ್ಚುವರಿ ಸಮಯ ಬೇಕಾಯಿತು.

ಇದರಿಂದ ಕಂಟೈನರ್ ವೆಚ್ಚ, ಇಂಧನ ವೆಚ್ಚ ಹಾಗೂ ಯುದ್ಧ ಅಪಾಯ ವಿಮೆ ಹೆಚ್ಚಾಯಿತು. ಜೊತೆಗೆ, ಕಡಿಮೆ ಲಾಭಾಂಶ ಇರುವ ಬಟ್ಟೆ-ಜವಳಿ, ಚರ್ಮ, ಕೃಷಿ ಉತ್ಪನ್ನಗಳು, ಸಮುದ್ರ ಆಹಾರ, ರಾಸಾಯನಿಕಗಳು ಹಾಗೂ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಉತ್ಪನ್ನಗಳೂ ದುಬಾರಿಯಾದವು.

ಇದರ ಜೊತೆಗೆ ಹಾರ್ಮುಜ್ ಜಲಸಂಧಿಯ ಅಸ್ಥಿರತೆ ಭಾರತದ ಇಂಧನ ಭದ್ರತೆಯ ಮೇಲೂ ಪರಿಣಾಮ ಬೀರಿದೆ. ಒಂದೆಡೆ ಇಂಧನ ಆಮದು ಮಾರ್ಗ, ಮತ್ತೊಂದೆಡೆ ಯೂರೋಪ್‌ಗೆ ರಫ್ತು ಮಾರ್ಗಎರಡೂ ಒಂದೇ ಸಮಯದಲ್ಲಿ ಜಾಗತಿಕ ಬಿಕ್ಕಟ್ಟು ಸೃಷ್ಟಿಸಿವೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR